ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977

ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರಿಂದ
ಮುದ್ರಿತವಾಗಿ ಪ್ರಕಟಿಸಲಾಗಿದೆ

# ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977

# ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977

## ವಿಷಯಾನುಕ್ರಮಣಿಕೆ

### ಅಧ್ಯಾಯ-I

### ಪ್ರಾರಂಭಿಕ


| ಪ್ರಕರಣಗಳು: | | ಪುಟಗಳು |
|---|---|---|
| 1. | ಸಂಕ್ಷಿಪ್ತ, ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ | 2 |
| 2. | ಅನ್ವಯ | 2 |
| 3. | ಪರಿಭಾಷೆಗಳು | 3 |


### ಅಧ್ಯಾಯ-II

### ರಾಜ್ಯದಲ್ಲಿನ ರದ್ದಿಯಾತಿ ಮತ್ತು ಅವುಗಳನ್ನು ನಿಹಿತಗೊಳಿಸುವುದು ಹಾಗೂ ಅದರ ಪರಿಣಾಮಗಳು


| | | |
|---|---|---|
| 4. | ಇನಾಮುಗಳ ರದ್ದಿಯಾತಿ, ನಿಹಿತಗೊಳಿಸುವುದು ಮತ್ತು ಅದರ ಪರಿಣಾಮಗಳು | 5 |
| 5. | ಅಧಿಭೋಗದಾರರಾಗಿ ನೋಂದಾಯಿತರಾಗುವ ಹಕ್ಕು | 6 |
| 6. | ಕೆಲವು ಭೂಮಿಗಳನ್ನು ನೋಂದಾಯಿಸತಕ್ಕದ್ದಲ್ಲ | 7 |
| 7. | ಕಟ್ಟಡಗಳನ್ನು ನಿಹಿತಗೊಳಿಸುವುದು | 7 |
| 8. | ಬೇಸಾಯೇತರ ಉದ್ದೇಶಗಳಿಗಾಗಿ ಉಪಯೋಗಿಸಲಾದ ಬೇಸಾಯ ಭೂಮಿಗೆ ಹಕ್ಕು | 8 |
| 9. | ರಾಜ್ಯ ಸರ್ಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡುವ ಹೊಣೆ | 8 |
| 10. | ಕೆಲವು ಸಂದರ್ಭಗಳಲ್ಲಿ ಹಕ್ಕನ್ನು ಉಳಿಸುವುದು | 9 |


### ಅಧ್ಯಾಯ-III


| | | |
|---|---|---|
| 11. | ಅಧಿಭೋಗದಾರನೆಂದು ನೋಂದಾಯಿತನಾಗುವ ಬಗ್ಗೆ ಪ್ರಕ್ರಿಯೆ | 9 |
| 12. | ಮೇಲ್ಕೊಡುಗೆ, ಇತ್ಯಾದಿಗಳ ಸಂದಾಯ | 10 |


### ಅಧ್ಯಾಯ-IV

### ವೈಯಕ್ತಿಯ ಇನಾಮುಗಳಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ಧರಿಸುವುದು


| | | |
|---|---|---|
| 13. | ಸಂದಾಯ ಮಾಡಬೇಕಾದ ಮೊಬಲಗನ್ನು ಹೇಗೆ ನಿರ್ಧರಿಸಬೇಕು | 10 |
| 14. | ಸಂದಾಯ ಮಾಡಬೇಕಾದ ಮೊಬಲಗು | 10 |
| 15. | ಮೊಬಲಗಿನ ಸಂದಾಯ | 11 |
| 16. | ಮಧ್ಯಕಾಲೀನ ಸಂದಾಯ | 11 |
| 17. | ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಡೆಪ್ಯುಟಿ ಕಮೀಷನರನು ನಿರ್ಧರಿಸುವುದು | 12 |
| 18. | ಲೆಕ್ಕಪತ್ರಗಳಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ನೋಟೀಸುಗಳು | 12 |
| 19. | ಡೆಪ್ಯುಟಿ ಕಮೀಷನರು ಮೊಬಲಗನ್ನು ಹಂಚಿಕೊಡುವುದು | 13 |
| 20. | ಮೊಬಲಗಿನ ಹಂಚಿಕೆಯ ಬಗ್ಗೆ ಪ್ರಕ್ರಿಯೆ | 13 |
| 21. | ಸಾಲ ಕೊಟ್ಟವರ ಕ್ಲೇಮುಗಳು | 13 |
| 22. | ಮೊಬಲಗಿನಲ್ಲಿನ ಹಿತಾಸಕ್ತಿಯ ಪ್ರಾಪ್ತಿ | 14 |

## ಅಧ್ಯಾಯ-V

## ಧಾರ್ಮಿಕ ಮತ್ತು ಧರ್ಮಾರ್ಥ ಇನಾಮುಗಳಿಗೆ ಸಂಬಂಧಿಸಿ ಸಂದಾಯವಾಗಬೇಕಾದ ಮೊಬಲಗು


23. ಸಂದಾಯವಾಗಬೇಕಾದ ಮೊಬಲಗು 14

24. ಡೆಪ್ಯುಟಿ ಕಮಿಷನರು ಮೊಬಲಗನ್ನು ನಿರ್ಧರಿಸುವುದು 14


## ಅಧ್ಯಾಯ-VI

## ಸಂಕೀರ್ಣ


25. ವ್ಯಕ್ತಿಯು ಅಧಿಭೋಗದಾರನೆಂದು ನೋಂದಾಯಿತನಾಗಬಹುದಾದ ಭೂಮಿಯ ವಿಸ್ತೀರ್ಣ 14

26. ರಾಜ್ಯ ಸರ್ಕಾರದಲ್ಲಿ ನಿಹಿತವಾಗುವ ಭೂಮಿಗಳ ವಿಲೆ 14

27. ಡಿವಿಜನಲ್ ಕಮಿಷನರಿಂದ ಪುನರೀಕ್ಷಣೆ 14

28. ಡಿವಿಜನಲ್ ಕಮಿಷನರಿಂದ ನಿಯಂತ್ರಣ 15

29. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ 15

30. 17, 19 ಮತ್ತು 24ನೇ ಪ್ರಕರಣಗಳ ಮೇರೆಗಿನ ಆದೇಶಗಳ ಮೇಲೆ ಅಪೀಲು 15

31. ತಪ್ಪಾಗಿ ಅಥವಾ ಹೆಚ್ಚಾಗಿ ಮಾಡಿದ ಸಂದಾಯಗಳನ್ನು ಭೂಕಂದಾಯದ ಬಾಕಿ ಎಂಬಂತೆ ವಸೂಲ್ಮಾಡುವುದು 15

32. ಡೆಪ್ಯುಟಿ ಕಮಿಷನರಿಂದ ವಿಚಾರಣೆಗಳು 16

33. ಈ ಅಧಿನಿಯಮದ ಮೇರೆಗೆ ಅರ್ಜಿ, ಮನವಿ ಇತ್ಯಾದಿಗಳ ಮೇಲೆ ಸಂದಾಯವಾಗತಕ್ಕ ಫೀಜು 16

34. ಕೆಲವೊಂದು ಸಂದರ್ಭಗಳಲ್ಲಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ 16

35. ನಿಯಮ ರಚನಾಧಿಕಾರ 17

36. ದಂಡಗಳು 17

37. ತೊಂದರೆಗಳನ್ನು ನಿವಾರಿಸುವ ಅಧಿಕಾರ 18

38. ರಾಜ್ಯ ವಿಧಾನ ಮಂಡಲದ ಮುಂದೆ ನಿಯಮಗಳು ಮತ್ತು ಆದೇಶಗಳನ್ನು ಇರಿಸುವುದು 18

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಕ್ರಮಾಂಕ ಲಾ 7 ಎಲ್‌ಎಂಪಿ 85, ದಿನಾಂಕ 18ನೇ ಆಗಸ್ಟ್ 1985.**

ಕರ್ನಾಟಕ ರಾಜ್ಯಭಾಷಾ ಅಧಿನಿಯಮ, 1963 (ಕರ್ನಾಟಕ ಅಧಿನಿಯಮ, 1963ರ 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ರಾಜ್ಯದ ರಾಜ್ಯಪಾಲನಾದ ನಾನು ಶ್ರೀ ಎ.ಎನ್. ಬ್ಯಾನರ್ಜಿ ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977ರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
**ಎಂ. ಉಮೇಶ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

## ಕರ್ನಾಟಕ ಅಧಿನಿಯಮ, 1978ರ 10

**(1978ರ ಮೇ ಎಂಟನೆಯ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)**

## ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977

**(1978ರ ಮೇ ಮೂರನೆಯ ದಿನಾಂಕದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆದಿದೆ)**

ಕರ್ನಾಟಕ ರಾಜ್ಯದಲ್ಲಿ ಕೆಲವು ಇನಾಮುಗಳ ರದ್ದಿಯಾತಿಗಾಗಿ ಉಪಬಂಧಿಸುವ ಅಧಿನಿಯಮ.

ರಾಜ್ಯದಲ್ಲಿ ಕೆಲವು ವೈಯಕ್ತಿಕ, ಧಾರ್ಮಿಕ ಮತ್ತು ಧರ್ಮಾರ್ಥ ಇನಾಮುಗಳ ರದ್ದಿಯಾತಿಗಾಗಿ ಉಪಬಂಧಿಸುವ ಕಾನೂನುಗಳು ಈಗಾಗಲೇ ಜಾರಿಯಲ್ಲಿರುವುದರಿಂದ;

ರಾಜ್ಯದ ಕೆಲವು ಪ್ರದೇಶಗಳಲ್ಲಿ ಕೆಲವು ಪ್ರವರ್ಗಗಳ ಇನಾಮುಗಳು ಇನ್ನೂ ಅಸ್ತಿತ್ವದಲ್ಲಿರುವುದರಿಂದ;

ಸಾರ್ವಜನಿಕ ಹಿತದೃಷ್ಟಿಯಿಂದ ಇಂಥ ಉಳಿದ ಎಲ್ಲಾ ಇನಾಮುಗಳ ರದ್ದಿಯಾತಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೆಂಟನೆಯ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

### ಅಧ್ಯಾಯ-I
### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಅಧಿನಿಯಮ, 1977 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಅನ್ವಯ:-** ಈ ಅಧಿನಿಯಮವು ಕೆಳಕಂಡವುಗಳಲ್ಲಿ ಉಲ್ಲೇಖಿತವಾದವುಗಳನ್ನುಳಿದು, ಪರರಾಜ್ಯವು ಸುತ್ತುವರಿದಿರುವ ಗ್ರಾಮಗಳಲ್ಲಿನ ಇನಾಮುಗಳನ್ನು ಒಳಗೊಂಡು, ಎಲ್ಲ ಇನಾಮುಗಳಿಗೆ ಅನ್ವಯಿಸತಕ್ಕದ್ದು:-

1. ಮುಂಬಯಿ ವೈಯಕ್ತಿಕ ಇನಾಮುಗಳ ರದ್ದಿಯಾತಿ ಅಧಿನಿಯಮ, 1952 (ಮುಂಬಯಿ ಅಧಿನಿಯಮ 1953ರ XLI)

2. ಮುಂಬಯಿ ಸೇವಾ ಇನಾಮುಗಳ (ಸಮುದಾಯಕ್ಕೆ ಉಪಯುಕ್ತವಾಗುವ) ರದ್ದಿಯಾತಿ ಅಧಿನಿಯಮ, 1953 (ಮುಂಬಯಿ ಅಧಿನಿಯಮ, 1953ರ LXX)

3. ಮುಂಬಯಿ ವಿಲೀನ ರಾಜ್ಯಕ್ಷೇತ್ರಗಳ ಮತ್ತು ಪ್ರದೇಶಗಳ (ಜಾಗೀರು ರದ್ದಿಯಾತಿ) ಅಧಿನಿಯಮ, 1953 (ಮುಂಬಯಿ ಅಧಿನಿಯಮ, 1954ರ XXXIX)

4. ಮುಂಬಯಿ ವಿಲೀನ ರಾಜ್ಯಕ್ಷೇತ್ರಗಳ ಸಂಕೀರ್ಣ ಪರಭಾರೆಗಳ ರದ್ದಿಯಾತಿ ಅಧಿನಿಯಮ, 1955 (ಮುಂಬಯಿ ಅಧಿನಿಯಮ, 1955ರ XXII)

5. ಹೈದರಾಬಾದ್ ಇನಾಮುಗಳ ರದ್ದಿಯಾತಿ ಅಧಿನಿಯಮ, 1955 (ಹೈದರಾಬಾದ್ ಅಧಿನಿಯಮ, 1955ರ VIII)

6. ಮದ್ರಾಸು ಎಸ್ಟೇಟುಗಳ (ರದ್ದಿಯಾತಿ ಮತ್ತು ರೈತವಾರಿಯಾಗಿ ಪರಿವರ್ತನೆ) ಅಧಿನಿಯಮ, 1948 (ಮದ್ರಾಸು ಅಧಿನಿಯಮ, 1948ರ XXVI)

7. ಮೈಸೂರು (ವೈಯಕ್ತಿಕ ಮತ್ತು ಸಂಕೀರ್ಣ) ಇನಾಮುಗಳ ರದ್ದಿಯಾತಿ ಅಧಿನಿಯಮ, 1954 (ಮೈಸೂರು ಅಧಿನಿಯಮ, 1955ರ 1)

8. ಮೈಸೂರು (ಧಾರ್ಮಿಕ ಮತ್ತು ಧರ್ಮಾರ್ಥ) ಇನಾಮುಗಳ ರದ್ದಿಯಾತಿ ಅಧಿನಿಯಮ, 1955 (ಮೈಸೂರು ಅಧಿನಿಯಮ, 1955ರ XVIII)

9. ಮುಂಬಯಿ ಪರಗಣ ಮತ್ತು ಕುಲಕರ್ಣಿ ವೇತನಗಳ (ರದ್ದಿಯಾತಿ) ಅಧಿನಿಯಮ, 1950 (ಮುಂಬಯಿ ಅಧಿನಿಯಮ 1950ರ LX)

10. ಕರ್ನಾಟಕ ಗ್ರಾಮ ಹುದ್ದೆಗಳ ರದ್ದಿಯಾತಿ ಅಧಿನಿಯಮ, 1961 (ಕರ್ನಾಟಕ ಅಧಿನಿಯಮ, 1961ರ 14).

11. ಕರ್ನಾಟಕ (ಸಂಡೂರು ಪ್ರದೇಶ) ಇನಾಮುಗಳ ರದ್ದಿಯಾತಿ ಅಧಿನಿಯಮ, 1976 (ಕರ್ನಾಟಕ ಅಧಿನಿಯಮ 1976ರ 54)

**3. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,–

(ಕ) "ಅಧಿನಿಯಮ" ಎಂದರೆ, ಕರ್ನಾಟಕ ಭೂಕಂದಾಯ ಅಧಿನಿಯಮ, 1964 (ಕರ್ನಾಟಕ ಅಧಿನಿಯಮ, 1964ರ 12)

(ಖ) "ಗೊತ್ತುಪಡಿಸಿದ ದಿನಾಂಕ" ಎಂದರೆ 1ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ದಿನಾಂಕ;

(ಗ) "ಡೆಪ್ಯುಟಿ ಕಮಿಷನರು" ಎಂಬುದು ಈ ಅಧಿನಿಯಮದ ಮೇರೆಗೆ ಡೆಪ್ಯುಟಿ ಕಮಿಷನರ ಅಧಿಕಾರಗಳನ್ನು ಚಲಾಯಿಸಲು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಅಧಿಕೃತಗೊಳಿಸಿದ, ಅಸಿಸ್ಟೆಂಟ್ ಕಮೀಷನರ ದರ್ಜೆಗೆ ಕಡಿಮೆಯಿರದ, ಯಾವನೇ ಅಧಿಕಾರಿಯನ್ನು ಒಳಗೊಳ್ಳುತ್ತದೆ;

(ಘ) "ಪರರಾಜ್ಯವು ಸುತ್ತುವರಿದಿರುವ ಗ್ರಾಮಗಳು" ಎಂದರೆ, ಪ್ರಾಂತ ಮತ್ತು ರಾಜ್ಯ (ಪರರಾಜ್ಯವು ಸುತ್ತುವರಿದಿರುವ ಪ್ರದೇಶದ ವಿಲೀನ) ಆದೇಶ, 1950 ಮತ್ತು ಭಾರತ ಮತ್ತು ಹೈದರಾಬಾದ್ (ಪರ ರಾಜ್ಯವು ಸುತ್ತುವರಿದಿರುವ ಪ್ರದೇಶಗಳ ವಿನಿಮಯ) ಆದೇಶ, 1950ರ ಉಪಬಂಧಗಳಿಗನುಸಾರವಾಗಿ ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ವರ್ಗಾಯಿತವಾದ ಗ್ರಾಮಗಳು;

(ಙ) "ಇನಾಮು" ಎಂಬುದು ಇನಾಮು ಗ್ರಾಮವನ್ನು ಮತ್ತು ಸಣ್ಣ ಇನಾಮನ್ನು, ಜಾಗೀರನ್ನು ಅವು ವೈಯಕ್ತಿಕವಾಗಿರಲಿ, ಧಾರ್ಮಿಕವಾಗಿರಲಿ, ಧರ್ಮಾರ್ಥವಾಗಿರಲಿ ಅಥವಾ ಅನ್ಯಥಾ ಆಗಿರಲಿ–ಒಳಗೊಳ್ಳುತ್ತದೆ.

(ಚ) "ಇನಾಮುದಾರ" ಎಂದರೆ,–

(i) ವೈಯಕ್ತಿಕ ಇನಾಮಿನ ಸಂದರ್ಭದಲ್ಲಿ, ಒಂದು ಇನಾಮು ಗ್ರಾಮವನ್ನು ಅಥವಾ ಅದರಲ್ಲಿನ ಹಿಸ್ಸೆಯನ್ನು ನ್ಯಾಸವಾಗಿ ಹೊಂದಿರುವ ಅಥವಾ ಸ್ವಂತ ಪ್ರಯೋಜನಕ್ಕಾಗಿ ಒಡೆತನ ಹೊಂದಿರುವ ವ್ಯಕ್ತಿ ಮತ್ತು ಇದು ಇನಾಮುದಾರನ ಹಿತಾಸಕ್ತಿಯಲ್ಲಿನ ಉತ್ತರಾಧಿಕಾರಿಗಳನ್ನು ಒಳಗೊಳ್ಳುತ್ತದೆ; ಮತ್ತು

(ಕ) ಇನಾಮುದಾರನು ಅಪ್ರಾಪ್ತವಯಸ್ಕನಾಗಿರುವಲ್ಲಿ ಮತ್ತು ಅಸ್ವಸ್ಥ ಮನಸ್ಕನಾಗಿರುವಲ್ಲಿ ಅಥವಾ ಹುಟ್ಟು ದಡ್ಡನಾಗಿರುವಲ್ಲಿ ಅವನ ಪಾಲಕ, ಸಮಿತಿ ಅಥವಾ ಇತರ ಕಾನೂನು ಸಮ್ಮತ ರಕ್ಷಕ;

(ಖ) ಇನಾಮುದಾರನು ಜಂಟಿ ಹಿಂದೂ ಕುಟುಂಬವಾಗಿದ್ದಲ್ಲಿ, ಅಂಥ ಜಂಟಿ ಹಿಂದೂ ಕುಟುಂಬ; ಮತ್ತು

(ii) ಧಾರ್ಮಿಕ ಅಥವಾ ಧರ್ಮಾರ್ಥ ಇನಾಮಿನ ಸಂದರ್ಭದಲ್ಲಿ, ಇನಾಮಿನ ಒಡೆತನವನ್ನು ಹೊಂದಿರುವ ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆ;

(ಛ) "ಇನಾಮುಭೂಮಿ" ಅಥವಾ "ಇನಾಮುಗ್ರಾಮ" ಎಂದರೆ,-

ಈ ಅಧಿನಿಯಮದ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯು ನ್ಯಾಸದ ರೂಪದಲ್ಲಿ ಇನಾಮಾಗಿ ಹೊಂದಿರುವ ಅಥವಾ ತನ್ನ ಸ್ವಂತ ಪ್ರಯೋಜನಕ್ಕಾಗಿ ಒಡೆತನವನ್ನು ಹೊಂದಿರುವ, ಸಂದರ್ಭಾನುಸಾರ ಭೂಮಿ ಅಥವಾ ಗ್ರಾಮ;

(ಜ) "ಭೂ ದಾಖಲೆಗಳು" ಎಂದರೆ, ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಥವಾ ಈ ಅಧಿನಿಯಮದ ಉದ್ದೇಶಗಳಿಗೆ ಸುಸಂಬದ್ಧವಾದ ಯಾವುದೇ ಇತರ ಕಾನೂನಿನ ಮೇರೆಗೆ ಇಟ್ಟುಕೊಂಡು ಬಂದಿರುವ ದಾಖಲೆಗಳು;

(ಝ) "ಸಣ್ಣ ಇನಾಮು" ಎಂದರೆ, ಪರಭಾರೆಯಾದ ಗ್ರಾಮದಲ್ಲಿ ಅಥವಾ ಪರಭಾರೆಯಾಗದ ಗ್ರಾಮದಲ್ಲಿ ಇರುವ ಇನಾಮು ಗ್ರಾಮವಲ್ಲದ, ಪರಭಾರೆಯಾದ ಹಿಡುವಳಿ;

(ಞ) "ವ್ಯಕ್ತಿ" ಎಂಬುದು ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಯನ್ನು ಮತ್ತು ಜಂಟಿ ಹಿಂದೂ ಕುಟುಂಬದ ಸಂದರ್ಭದಲ್ಲಿ ಅಂಥ ಜಂಟಿ ಹಿಂದೂ ಕುಟುಂಬವನ್ನು ಒಳಗೊಳ್ಳುತ್ತದೆ;

(ಟ) "ವೈಯಕ್ತಿಕ ಇನಾಮು" ಎಂದರೆ, ಯಾವನೇ ವ್ಯಕ್ತಿಗೆ ಭೂಕಂದಾಯದ ಸಂದಾಯದಿಂದ ಪೂರ್ಣ ಅಥವಾ ಭಾಗಶಃ ವಿನಾಯಿತಿ ಕೊಟ್ಟು ಮಂಜೂರು ಮಾಡಲಾದ ಮತ್ತು 'ದೇವಾದಾಯ' ಅಥವಾ 'ಧರ್ಮಾದಾಯ' ಅಲ್ಲದ ಇನಾಮು ಎಂದು ಭೂ ದಾಖಲೆಗಳಲ್ಲಿ ನಮೂದಿತವಾದ ಗ್ರಾಮ ಅಥವಾ ಭೂಮಿ, ಮತ್ತು ಇದು ಧಾರ್ಮಿಕ ಅಥವಾ ಧರ್ಮಾರ್ಥ ಇನಾಮನ್ನು ಒಳಗೊಳ್ಳುವುದಿಲ್ಲ;

(ಠ) "ಧಾರ್ಮಿಕ ಸಂಸ್ಥೆ" ಎಂಬುದು ದೇವಸ್ಥಾನವನ್ನು ಒಳಗೊಳ್ಳುತ್ತದೆ;

(ಡ) "ಧಾರ್ಮಿಕ ಅಥವಾ ಧರ್ಮಾರ್ಥ ಇನಾಮು" ಎಂದರೆ, ಧಾರ್ಮಿಕ ಅಥವಾ ಧರ್ಮಾರ್ಥ ಸಂಸ್ಥೆಗೆ ಅಥವಾ ಅದರ ಪ್ರಯೋಗಕ್ಕಾಗಿ ಭೂಕಂದಾಯದ ಸಂದಾಯದಿಂದ ಪೂರ್ಣ ಅಥವಾ ಭಾಗಶಃ ವಿನಾಯಿತಿಯನ್ನು ಕೊಟ್ಟು ಮಂಜೂರು ಮಾಡಿದ ಯಾವುದೇ ಗ್ರಾಮ, ಗ್ರಾಮದ ಭಾಗ ಅಥವಾ ಭೂಮಿ.

**ವಿವರಣೆ.-** ಯಾವುದೇ ಮಂಜೂರಾತಿಯ ವೈಯಕ್ತಿಕ ಇನಾಮು ಅಥವಾ ಧಾರ್ಮಿಕವಾದ ಅಥವಾ ಧರ್ಮಾರ್ಥವಾದ ಇನಾಮೆ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅಂಥ ಪ್ರಶ್ನೆಯನ್ನು ರಾಜ್ಯ ಸರ್ಕಾರಕ್ಕೆ ಕಳಿಸತಕ್ಕದ್ದು ಮತ್ತು ಅದರ ನಿರ್ಣಯವು ಅಂತಿಮವಾದುದಾಗಿರತಕ್ಕದ್ದು;

(ಣ) "ನ್ಯಾಯಾಧಿಕರಣ" ಎಂದರೆ, ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1961ರ 48ನೇ ಪ್ರಕರಣದ ಮೇರೆಗೆ ರಚಿತವಾದ ನ್ಯಾಯಾಧಿಕರಣ.

(2) ಈ ಅಧಿನಿಯಮದಲ್ಲಿ ಉಪಯೋಗಿಸಲಾಗಿರುವ ಆದರೆ ಪರಿಭಾಷಿಸಿರದ ಪದಗಳಿಗೆ ಮತ್ತು ಪದಾವಳಿಗೆ ಈ ಅಧಿನಿಯಮದಲ್ಲಿ ಅಥವಾ ಕರ್ನಾಟಕ ಭೂ ಸುಧಾರಣೆಗಳ ಅಧಿನಿಯಮ, 1960 (ಕರ್ನಾಟಕ ಅಧಿನಿಯಮ, 1962ರ 10)ರಲ್ಲಿ ಅವುಗಳಿಗೆ ಕೊಟ್ಟಿರುವ ಅರ್ಥವೇ ಇರತಕ್ಕದ್ದು.

## ಅಧ್ಯಾಯ-II

## ರಾಜ್ಯದಲ್ಲಿನ ಇನಾಮುಗಳ ರದ್ದಿಯಾತಿ ಮತ್ತು ಅವುಗಳನ್ನು ನಿಹಿತಗೊಳಿಸುವುದು ಹಾಗೂ ಅದರ ಪರಿಣಾಮಗಳು

**4. ಇನಾಮುಗಳ ರದ್ದಿಯಾತಿ, ನಿಹಿತಗೊಳಿಸುವುದು ಮತ್ತು ಅದರ ಪರಿಣಾಮಗಳು:-** (1) ಯಾವುದೇ ಕರಾರಿನಲ್ಲಿ, ಮಂಜೂರಾತಿಯಲ್ಲಿ ಅಥವಾ ಇತರ ಲಿಖಿತದಲ್ಲಿ ಅಥವಾ ನ್ಯಾಯಾಲಯದ ಯಾವುದೇ ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ 2ನೇ ಪ್ರಕರಣದ ಮೇರೆಗೆ ಈ ಅಧಿನಿಯಮವು ಅನ್ವಯವಾಗುವ ಎಲ್ಲ ಇನಾಮುಗಳ ಮತ್ತು ಸಣ್ಣ ಇನಾಮುಗಳ ಇನಾಮು ಅವಧಿಯು ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು ರದ್ದಾಗತಕ್ಕದ್ದು.

(2) ಈ ಅಧಿನಿಯಮದಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದ್ದನ್ನುಳಿದು, ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು, ಕೆಳಕಂಡ ಪರಿಣಾಮಗಳು ಉಂಟಾಗತಕ್ಕದ್ದು, ಎಂದರೆ:-

(ಕ) ಪರಭಾರೆಯಾದ ಹಿಡುವಳಿಗಳ ಇನಾಮುಗಳಿಗೆ ಸಂಬಂಧಪಟ್ಟ ಈ ಅಧಿನಿಯಮದ ಉಪಬಂಧಗಳು, ಇನಾಮಿಗೆ ಅಥವಾ ಪರಭಾರೆಯಾದ ಹಿಡುವಳಿಗೆ ಅವು ಅನ್ವಯವಾಗುವಲ್ಲಿ ನಿರಸಿತವಾಗಿವೆಯೆಂದು ಭಾವಿಸತಕ್ಕದ್ದು ಮತ್ತು ಪರಭಾರೆಯಾಗಿರದ ಗ್ರಾಮಗಳಿಗೆ ಅಥವಾ ಭೂಮಿಗಳಿಗೆ ಅನ್ವಯವಾಗುವ ಈ ಅಧಿನಿಯಮದ ಮತ್ತು ಇತರ ಎಲ್ಲ ಅಧಿನಿಯಮಿತಿಗಳ ಉಪಬಂಧಗಳು ಸದರಿ ಇನಾಮುಗಳಿಗೆ ಅಥವಾ ಪರಭಾರೆಯಾದ ಹಿಡುವಳಿಗೆ ಅನ್ವಯಿಸತಕ್ಕದ್ದು;

(ಖ) ಎಲ್ಲ ಸಾಮುದಾಯಿಕ ಭೂಮಿಯಲ್ಲಿ, ಸಾಗುವಳಿ ಭೂಮಿಗಳಲ್ಲಿ, ಸಾಗುವಳಿಯಾಗಿರದ ಭೂಮಿಗಳಲ್ಲಿ, ಅವುಗಳ ಕಂದಾಯ ನಿರ್ಧರಣೆಯಾಗಿರಲಿ ಅಥವಾ ಇಲ್ಲದಿರಲಿ ಬಂಜರುಭೂಮಿಗಳಲ್ಲಿ, ಹುಲ್ಲುಗಾವಲುಗಳಲ್ಲಿ, ಅರಣ್ಯಗಳಲ್ಲಿ, ಗಣಿಗಳಲ್ಲಿ ಮತ್ತು ಖನಿಜಗಳಲ್ಲಿ, ಕಲ್ಲುಗಣಿಗಳಲ್ಲಿ, ನದಿಗಳಲ್ಲಿ ಮತ್ತು ತೊರೆಗಳಲ್ಲಿ, ಕೆರೆಗಳಲ್ಲಿ ಮತ್ತು ನೀರಾವರಿ ಕಾಮಗಾರಿಗಳಲ್ಲಿ, ಮೀನುಗಾರಿಕೆಗಳಲ್ಲಿ ಮತ್ತು ಹಾಯ್ಗಡಗಳಲ್ಲಿ ಇರುವವುಗಳನ್ನು ಒಳಗೊಂಡು, ಇನಾಮುದಾರನಲ್ಲಿ ನಿಹಿತವಾಗಿರುವ ಎಲ್ಲ ಹಕ್ಕುಗಳು, ಸ್ವಾಮ್ಯ ಮತ್ತು ಹಿತಾಸಕ್ತಿಯು ಕೊನೆಗೊಳ್ಳತಕ್ಕದ್ದು ಮತ್ತು ಎಲ್ಲ ಪೂರ್ವಾಧಿಗಳಿಂದ ಮುಕ್ತವಾಗಿ ರಾಜ್ಯ ಸರ್ಕಾರದಲ್ಲಿ ನಿರುಪಾಧಿಕವಾಗಿ ನಿಹಿತವಾಗತಕ್ಕದ್ದು;

(ಗ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಮೇರೆಗೆ ವ್ಯಕ್ತವಾಗಿ ಉಳಿಸಲಾದ ಹಿತಾಸಕ್ತಿಗಳಲ್ಲದ, ಇನಾಮಿನಲ್ಲಿನ ಇತರ ಯಾವುದೇ ಹಿತಾಸಕ್ತಿಯನ್ನು ಇನಾಮುದಾರನು ಹೊಂದಿರುವುದು ಮುಕ್ತಾಯವಾಗತಕ್ಕದ್ದು;

(ಘ) ನಿಹಿತವಾದ ದಿನಾಂಕದಂದು, ಅಥವಾ ಅನಂತರ ಅಂಥ ಇನಾಮು ಗ್ರಾಮಗಳಲ್ಲಿ ಅಥವಾ ಸಣ್ಣ ಇನಾಮುಗಳಲ್ಲಿ ಅಡಕವಾದ ಭೂಮಿಗಳ ಸಂಬಂಧದಲ್ಲಿ ಪ್ರಾಪ್ತವಾಗುವ ಉಪಕರಣಗಳನ್ನು ಮತ್ತು ಸಂಭಾವನೆಗಳನ್ನು ಒಳಗೊಂಡು ಎಲ್ಲ ಭೂ ಕಂದಾಯವನ್ನು ರಾಜ್ಯ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದು, ಆದರೆ ಇನಾಮುದಾರನಿಗೆ ಸಂದಾಯ ಮಾಡತಕ್ಕದ್ದಲ್ಲ ಮತ್ತು ಈ ಖಂಡವನ್ನು ಉಲ್ಲಂಘಿಸಿ ಮಾಡಿದ ಯಾವುದೇ ಸಂದಾಯವು ಸಿಂಧುವಾಗತಕ್ಕದ್ದಲ್ಲ;

(ಙ) ನಿಹಿತವಾಗುವ ದಿನಾಂಕದಂದು ಅಂಥ ಇನಾಮು ಗ್ರಾಮಕ್ಕೆ ಅಥವಾ ಸಣ್ಣ ಇನಾಮನಿಗೆ ಸಂಬಂಧಿಸಿ ಕಾನೂನು ಬದ್ಧವಾಗಿ ಬಾಕಿ ಉಳಿದಿರುವ ಎಲ್ಲ ಭೂ ಕಂದಾಯದ ಬಾಕಿಗಳು, ಅವು ಜೋಡಿಯಾಗಿರಲಿ ಅಥವಾ ಜೋಡಿ ಕಂದಾಯವಾಗಿರಲಿ ಮತ್ತು ಉಪಕರಗಳು, ಅಂಥ ದಿನಾಂಕದ ಅನಂತರ ಯಾವ ಇನಾಮುದಾರನು ಅವುಗಳನ್ನು ಸಂದಾಯ ಮಾಡಬೇಕಾಗಿದ್ದಿತೋ ಆ ಇನಾಮುದಾರನಿಂದ ವಸೂಲು ಮಾಡಿಕೊಳ್ಳುವುದು ಮುಂದುವರಿಯತಕ್ಕದ್ದು ಮತ್ತು ವಸೂಲಿಯ ಇತರ ಯಾವುದೇ ವಿಧಾನಕ್ಕೆ ಬಾಧೆ

ಬಾರದಂತೆ, ಈ ಅಧಿನಿಯಮದ ಮೇರೆಗೆ ಅಂಥ ಇನಾಮುದಾರನಿಗೆ ಸಂದಾಯವಾಗಬೇಕಾದ ಮೊಬಲಗಿನಿಂದ ಅಂಥ ಬಾಕಿಗಳ ಹಾಗೂ ಉಪಕರಗಳ ಮೊಬಲಗನ್ನು ಮುರಿದುಕೊಳ್ಳುವ ಮೂಲಕ ವಸೂಲು ಮಾಡಬಹುದು;

(ಚ) ಅಂಥ ಯಾವುದೇ ಇನಾಮು, ಯಾವುದೇ ನ್ಯಾಯಾಲಯದ ಯಾವುದೇ ಡಿಕ್ರಿಯ ಅಥವಾ ಇತರ ಆದೇಶಿಕೆಯ ಅಮಲ್ಜಾರಿಯಲ್ಲಿ ಜಪ್ತಿಗೊಳಗಾಗತಕ್ಕದ್ದಲ್ಲ ಮತ್ತು ನಿಹಿತವಾಗುವ ದಿನಾಂಕದಂದು ಅಂಥ ಇನಾಮು ಗ್ರಾಮದ ಅಥವಾ ಸಣ್ಣ ಇನಾಮಿನ ಸಂಬಂಧದಲ್ಲಿ ಅಸ್ತಿತ್ವದಲ್ಲಿರುವ ಯಾವುದೇ ಜಪ್ತಿಯು ಅಥವಾ ಅಂಥ ದಿನಾಂಕಕ್ಕೆ ಮುಂಚೆ ಜಪ್ತಿಗಾಗಿ ಮಾಡಿದ ಇತರ ಯಾವುದೇ ಆದೇಶವು ಜಾರಿಯಲ್ಲಿರುವುದು ಮುಕ್ತಾಯವಾಗತಕ್ಕದ್ದು;

(ಛ) ರಾಜ್ಯ ಸರ್ಕಾರವು, ಉಂಟಾಗಬಹುದಾದ ಯಾವುದೇ ಅಡ್ಡಿಯನ್ನು ನಿವಾರಿಸಿದ ಅನಂತರ ಇನಾಮನ್ನು ಮತ್ತು ಅದರ ಆಡಳಿತಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಗತ್ಯವಾಗಬಹುದಾದ, ಇನಾಮಿಗೆ ಸಂಬಂಧಿಸಿದ ಎಲ್ಲ ಲೆಕ್ಕಪತ್ರಗಳನ್ನು, ರಿಜಿಸ್ಟರುಗಳನ್ನು, ಪಟ್ಟಾಗಳನ್ನು ಮುಚ್ಚಳಿಕೆಯನ್ನು, ನಕಾಶೆಗಳನ್ನು, ನಕ್ಷೆಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ತತ್‌ಕ್ಷಣವೇ ಸ್ವಾಧೀನಕ್ಕೆ ತೆಗೆದುಕೊಳ್ಳಬಹುದು;

(ಜ) ಯಾವ ಇನಾಮುದಾರನ ಹಕ್ಕುಗಳು (ಬಿ) ಖಂಡದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿವೆಯೋ ಅವನು, ಈ ಅಧಿನಿಯಮದಲ್ಲಿ ಉಪಬಂಧಿಸಿದಂತೆ ಅಂಥ ಮೊಬಲಗನ್ನು ಮಾತ್ರ ರಾಜ್ಯ ಸರ್ಕಾರದಿಂದ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು;

(ಝ) ಇನಾಮುದಾರನ ಮತ್ತು ಸಣ್ಣ ಇನಾಮು ಧಾರಕನ ನಡುವೆ ಇರುವ, ವರಿಷ್ಠ ಹಿಡುವಳಿದಾರ ಮತ್ತು ಕನಿಷ್ಠ ಹಿಡುವಳಿದಾರ ಎಂಬ ಸಂಬಂಧವು ಅಳಿದುಹೋಗತಕ್ಕದ್ದು;

(ಞ) ಇನಾಮಿನ ಗೇಣಿದಾರನು ಮತ್ತು ಅವರ ಅಧೀನದಲ್ಲಿ ಹಿಡುವಳಿಯನ್ನು ಹೊಂದಿರುವ ವ್ಯಕ್ತಿಗಳು ಮತ್ತು ಸಣ್ಣ ಇನಾಮುಗಳ ಧಾರಕರು, ರಾಜ್ಯ ಸರ್ಕಾರಕ್ಕೆ ವಿರುದ್ಧವಾಗಿ, ಕರ್ನಾಟಕ ಭೂಸುಧಾರಣಾ ಅಧಿನಿಯಮ, 1961ರ ಮೂಲಕ ಅಥವಾ ಮೇರೆಗೆ ಉಪಬಂಧಿಸಿರುವಂಥ ಹಕ್ಕುಗಳಿಗೆ ಮತ್ತು ವಿಶೇಷ ಹಕ್ಕುಗಳಿಗೆ ಮಾತ್ರ ಹಕ್ಕುಳ್ಳವರಾಗಿರತಕ್ಕದ್ದು ಮತ್ತು ಅಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು, ಮತ್ತು ಇನಾಮುದಾರನಿಗೆ ವಿರುದ್ಧವಾಗಿ, ನಿಹಿತವಾಗುವ ದಿನಾಂಕಕ್ಕೆ ಮುಂಚೆ ಇನಾಮಿನಲ್ಲಿ ಅವರಿಗೆ ಪ್ರಾಪ್ತವಾಗಿರಬಹುದಾದ ಯಾವುದೇ ಇತರ ಹಕ್ಕುಗಳು ಮತ್ತು ವಿಶೇಷ ಹಕ್ಕುಗಳು ಕೊನೆಗೊಳ್ಳತಕ್ಕದ್ದು ಮತ್ತು ಮುಕ್ತಾಯಗೊಳ್ಳತಕ್ಕದ್ದು ಮತ್ತು ರಾಜ್ಯ ಸರ್ಕಾರದ ಅಥವಾ ಅಂಥ ಇನಾಮುದಾರನ ವಿರುದ್ಧವಾಗಿ ಜಾರಿಗೊಳಿಸುವಂಥದಾಗಿರತಕ್ಕದ್ದಲ್ಲ.

(3) (1)ನೇ ಉಪಪ್ರಕರಣದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಇರುವುದು ಯಾವುದೂ, ನಿಹಿತವಾಗುವ ದಿನಾಂಕಕ್ಕೆ ಮುಂಚಿತವಾಗಿ, ಇನಾಮುದಾರನಾಗಿ ತನಗಿರುವ ಹಕ್ಕುಗಳ ಕಾರಣದಿಂದಾಗಿ ತನಗೆ ಬರಬೇಕಾಗಿರುವ ಯಾವುದೇ ಮೊತ್ತವನ್ನು ಇನಾಮುದಾರನು ವಸೂಲು ಮಾಡುವುದಕ್ಕೆ ಪ್ರತಿಷೇಧವಾಗಿ ಪರಿಣಮಿಸತಕ್ಕದ್ದಲ್ಲ ಮತ್ತು ಈ ಅಧಿನಿಯಮವು ಆಗಿರದಿದ್ದರೆ ಅವನಿಗೆ ಲಭ್ಯವಾಗಬಹುದಾಗಿದ್ದ, ಕಾನೂನಿನ ಯಾವುದೇ ಕ್ರಮದ ಮೂಲಕ ಅಂಥ ಯಾವುದೇ ಮೊತ್ತವನ್ನು ಅವನು ವಸೂಲ್ಮಾಡಬಹುದು.

**5. ಅಧಿಭೋಗದಾರರಾಗಿ ನೋಂದಾಯಿತರಾಗುವ ಹಕ್ಕು:–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು,–

(1) ಇನಾಮುದಾರನ ಅಥವಾ ಸಣ್ಣ ಇನಾಮಿನ ಧಾರಕನ ಪ್ರತಿಯೊಬ್ಬ ಗೇಣಿದಾರನು 1974ರ ಮಾರ್ಚ್ ಒಂದನೆಯ ದಿನಾಂಕದ ನಿಕಟಪೂರ್ವದಲ್ಲಿ ಯಾವ ಭೂಮಿಗಳಿಗೆ ಸಂಬಂಧಿಸಿ ಅವನು ಗೇಣಿದಾರನಾಗಿದ್ದನೋ ಆ ಭೂಮಿಗಳಿಗೆ ಸಂಬಂಧಿಸಿ ಅಧಿಭೋಗದಾರನಾಗಿ ನೋಂದಾಯಿತನಾಗಲು ಹಕ್ಕುಳ್ಳವನಾಗಿರತಕ್ಕದ್ದು.

(2) ಇನಾಮುದಾರನು ಧಾರ್ಮಿಕ ಪೂಜೆಯ ಸಂಸ್ಥೆಯಾಗಿರುವಲ್ಲಿ–

(i) ಪೂಜಾರಿಯಾಗಿ, ಅರ್ಚಕನಾಗಿ ಅಥವಾ ಯಾವುದೇ ಹೆಸರಿನಿಂದ ಕರೆಯಲಾಗುವ ಅಂಥದೇ ಪದದಲ್ಲಿ ಆ ಸಂಸ್ಥೆಯಲ್ಲಿ ಧಾರ್ಮಿಕ ಸೇವೆಯನ್ನು ಸಲ್ಲಿಸುತ್ತಿರುವ ಅಥವಾ ಆ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿರುವ ಅಥವಾ

(ii) ಅಂಥ ಸಂಸ್ಥೆಯಲ್ಲಿ ಯಾವುದೇ ಸೇವೆಯನ್ನು ಸಲ್ಲಿಸುತ್ತಿರುವ, ಮತ್ತು ತನ್ನ ಸ್ವಂತ ದೈಹಿಕ ಶ್ರಮದಿಂದ ಅಥವಾ ತನ್ನ ಕುಟುಂಬದ ಸದಸ್ಯರ ದೈಹಿಕ ಶ್ರಮದಿಂದ 1974ರ ಮಾರ್ಚ್ ಒಂದನೆಯ ದಿನಾಂಕಕ್ಕಿಂತ ಮುಂಚೆ ಮೂರು ವರ್ಷಗಳಿಗೆ ಕಡಿಮೆ, ಕಡಿಮೆಯಿಲ್ಲದ ನಿರಂತರ ಅವಧಿಯವರೆಗೆ ಸ್ವಂತವಾಗಿ ಸಾಗುವಳಿ ಮಾಡುತ್ತಿದ್ದು ಅಂಥ ಭೂಮಿಗೆ ಸಂಬಂಧಿಸಿ ಆ ಸಂಸ್ಥೆಗೆ ಹಣದ ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ಗೇಣಿಯನ್ನು ಕೊಡದೆ ಅಂಥ ಸಂಸ್ಥೆಯ ಇನಾಮಿನಲ್ಲಿ ಇರುವ ಯಾವುದೇ ಭೂಮಿಯ ಪ್ರಯೋಜನಗಳನ್ನು ಪಡೆಯುತ್ತಿರುವ ಯಾವನೇ ವ್ಯಕ್ತಿಯು ಅಂಥ ಭೂಮಿಯ ಅಧಿಭೋಗದಾರನಾಗಿ ನೋಂದಾಯಿತನಾಗಲು ಹಕ್ಕುಳ್ಳವನಾಗಿರತಕ್ಕದ್ದು.

(3) ಸಣ್ಣ ಇನಾಮಿನ ಧಾರಕನನ್ನು ಒಳಗೊಂಡು ಪ್ರತಿಯೊಬ್ಬ ಇನಾಮುದಾರನು ಸದರಿ ದಿನಾಂಕಕ್ಕೆ ನಿಕಟಪೂರ್ವದಲ್ಲಿ ತಾನು ಸ್ವಂತವಾಗಿ ಸಾಗುವಳಿ ಮಾಡುತ್ತಿದ್ದ ಎಲ್ಲ ಭೂಮಿಗಳ ಅಧಿಭೋಗದಾರನಾಗಿ ನೋಂದಾಯಿತನಾಗಲು ಹಕ್ಕುಳ್ಳವನಾಗಿರತಕ್ಕದ್ದು.

**6. ಕೆಲವು ಭೂಮಿಗಳನ್ನು ನೋಂದಾಯಿಸತಕ್ಕದ್ದಲ್ಲ:–** ಯಾವ ಸಣ್ಣ ಇನಾಮುಧಾರಕನಾಗಲಿ ಮತ್ತು ಯಾವ ಇನಾಮುದಾರನಾಗಲೀ,–

(i) ಸಾಮುದಾಯಿಕ ಭೂಮಿಗಳ, ಸಾಗುವಳಿಯಾಗಿರದ ಭೂಮಿಗಳ, ಬಂಜರು ಭೂಮಿಗಳ, ಗೋಮಾಳ ಭೂಮಿಗಳ, ಅರಣ್ಯ ಭೂಮಿಗಳ, ಕೆರೆಯ ಅಂಗಳಗಳ, ಗಣಿಗಳ, ಕಲ್ಲು ಗಣಿಗಳ, ನದಿಗಳ, ತೊರೆಗಳ, ಕೆರೆಗಳ ಮತ್ತು ನೀರಾವರಿ ಕಾಮಗಾರಿಗಳ;

(ii) ಅಂಥ ಸಣ್ಣ ಇನಾಮುಧಾರಕನಲ್ಲದ ಯಾವನೇ ವ್ಯಕ್ತಿಯ ಒಡೆತನದಲ್ಲಿರುವ ಕಟ್ಟಡಗಳನ್ನು ಯಾವ ಭೂಮಿಯ ಮೇಲೆ ನಿರ್ಮಿಸಲಾಗಿದೆಯೋ ಆ ಭೂಮಿಗಳ,

– ಅಧಿಭೋಗದಾರನೆಂದು ನೋಂದಾಯಿತನಾಗಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**7. ಕಟ್ಟಡಗಳನ್ನು ನಿಹಿತಗೊಳಿಸುವುದು:–** (1) ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಸಂದರ್ಭಾನುಸಾರ, ಸಣ್ಣ ಇನಾಮು ಧಾರಕನು ಅಥವಾ ಇನಾಮುದಾರನು ಒಡೆತನವನ್ನು ಹೊಂದಿರುವ ಸಣ್ಣ ಇನಾಮಿನ ಅಥವಾ ಇನಾಮಿನ ಪರಿಮಿತಿಗಳೊಳಗೆ ಇರುವ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿತವಾದ ಕಟ್ಟಡವನ್ನು ಹೊರತುಪಡಿಸಿ ಇತರ ಪ್ರತಿಯೊಂದು ಕಟ್ಟಡವು ಸಣ್ಣ ಇನಾಮು ಧಾರಕನ ಅಥವಾ ಇನಾಮುದಾರನಲ್ಲಿ ಅಂಥ ದಿನಾಂಕದಿಂದ ನಿಹಿತವಾಗತಕ್ಕದ್ದು.

(2) ಇನಾಮಿನ ಪರಿಮಿತಿಯೊಳಗೆ ಇರುವ ಪ್ರತಿಯೊಂದು ಖಾಸಗಿ ಕಟ್ಟಡವು ಸದರಿ ದಿನಾಂಕದಿಂದ, ಆ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಅದರ ಒಡೆತನವನ್ನು ಹೊಂದಿದ್ದ ವ್ಯಕ್ತಿಯಲ್ಲಿ ನಿಹಿತವಾಗತಕ್ಕದ್ದು.

(3) (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಇನಾಮುದಾರನಿಗೆ ಅಥವಾ ಸಣ್ಣ ಇನಾಮು ಧಾರಕನಿಗೆ ಸೇರಿದ ನಿವೇಶನದಲ್ಲಿರುವ ವಾಸದ ಮನೆಯನ್ನು ಗೇಣೀದಾರನು ಅಧಿಭೋಗಿಸುತ್ತಿರುವಲ್ಲಿ, ಅಂಥ ಗೇಣಿದಾರನನ್ನು ಅಲ್ಲಿಂದ ಹೊರಹಾಕತಕ್ಕದ್ದಲ್ಲ; ಆದರೆ–

(i) ಭೂಮಿಯ ಬಗ್ಗೆ ಸಂದಾಯವಾಗಬೇಕಾದ ಭೂಕಂದಾಯವನ್ನು;

(ii) ವಾಸದ ಮನೆಯನ್ನು ಯಾರು ಕಟ್ಟಿದರೆಂಬುದನ್ನು; ಮತ್ತು

(iii) ನಿಯಮಿಸಬಹುದಾದಂಥ ಇತರ ಅಂಶಗಳನ್ನು,-

ಗಮನಿಸಿ ನ್ಯಾಯಾಧಿಕರಣವು ನಿಗದಿಪಡಿಸಬಹುದಾದಂಥ ಮೊಬಲಗನ್ನು ಸಂದಾಯ ಮಾಡಿದ ಅನಂತರ ಅವನಿಗೆ ಅದರ ಮತ್ತು ನಿವೇಶನದ ಒಡೆತನವನ್ನು ಪ್ರದಾನ ಮಾಡತಕ್ಕದ್ದು.

**8. ಬೇಸಾಯೇತರ ಉದ್ದೇಶಗಳಿಗಾಗಿ ಉಪಯೋಗಿಸಲಾದ ಬೇಸಾಯ ಭೂಮಿಗೆ ಹಕ್ಕು:-** ಬೇಸಾಯದ ಉದ್ದೇಶಕ್ಕಾಗಿ ಉಪಯೋಗಿಸಿದ ಯಾವುದೇ ಭೂಮಿಯನ್ನು ಬೇಸಾಯೇತರ ಉದ್ದೇಶಕ್ಕಾಗಿ ಉಪಯೋಗಿಸಲು ಪರಿವರ್ತಿಸಿರುವಲ್ಲಿ, ಅಂತ ಭೂಮಿಯ ಧಾರಕನು, 7ನೇ ಪ್ರಕರಣದ (3)ನೇ ಉಪಪ್ರಕರಣದ ಉಪಬಂಧಗಳಿಗೆ ಮತ್ತು ಈ ಪ್ರಕರಣದ ಇತರ ಉಪಬಂಧಗಳಿಗೆ ಒಳಪಟ್ಟು ಆ ಭೂಮಿಯನ್ನು ಇಟ್ಟುಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು.

(2) ಪರಿವರ್ತಿಸಲಾದ ಭೂಮಿಯು, ಪರಿವರ್ತನೆಯ ಕಾಲದಲ್ಲಿ, ಗೇಣಿದಾರನ ಅಧಿಭೋಗದಲ್ಲಿದ್ದಲ್ಲಿ ಮತ್ತು ಪರಿವರ್ತಿತ ಭೂಮಿಯನ್ನು ಯಾವ ಬೇಸಾಯೇತರ ಉಪಯೋಗಕ್ಕಾಗಿ ಪರಿವರ್ತಿಸಲಾಯಿತೋ ಅಂಥ ಬೇಸಾಯೇತರ ಉದ್ದೇಶಕ್ಕಾಗಿ ಆ ಭೂಮಿಯನ್ನು ಉಪಯೋಗಿಸಲಾಗಿರದಿದ್ದಲ್ಲಿ ಅಂಥ ಭೂಮಿಯನ್ನು, ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ಗೇಣಿದಾರನ ಹೆಸರಿನಲ್ಲಿ ನೋಂದಾಯಿಸತಕ್ಕದ್ದು:

ಪರಂತು, ಆ ಹಿಡುವಳಿದಾರನು ಅಂಥ ಭೂಮಿಯನ್ನು ಬೇಸಾಯೇತರ ಉದ್ದೇಶಕ್ಕಾಗಿ ಉಪಯೋಗಿಸಲು ಸಾಧ್ಯವಾದುದನ್ನೆಲ್ಲ ಮಾಡಿದ್ದಾನೆಂದು, ಆದರೆ ತನ್ನ ನಿಯಂತ್ರಣಕ್ಕೆ ಮೀರಿದ ಕಾರಣಗಳಿಂದಾಗಿ ಹಾಗೆ ಮಾಡಲು ಅವನಿಗೆ ಸಾಧ್ಯವಾಗಿಲ್ಲವೆಂದು ರಾಜ್ಯ ಸರ್ಕಾರಕ್ಕೆ ಮನದಟ್ಟಾದರೆ, ಅದು ಲಿಖಿತ ಆದೇಶದ ಮೂಲಕ, ಆ ಭೂಮಿಯನ್ನು ಇಟ್ಟುಕೊಳ್ಳಲು ಆ ಹಿಡುವಳಿದಾರನಿಗೆ ಅನುಮತಿಸಬಹುದು:

ಮತ್ತೂ ಪರಂತು, ಹಿಂದಿನ ಪರಂತುಕದಲ್ಲಿ ಉಲ್ಲೇಖಿತವಾದ ಸಂದರ್ಭದಲ್ಲಿ, ಗೇಣಿದಾರರನ್ನು,

(i) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರಲ್ಲಿ ಏನೇ ಇದ್ದರೂ, ಆ ಅಧಿನಿಯಮದ 77ನೇ ಪ್ರಕರಣದ ಉದ್ದೇಶಗಳಿಗಾಗಿ ಭೂಚ್ಯುತ ಗೇಣಿದಾರನೆಂದು ತಿಳಿಯತಕ್ಕದ್ದು;

(ii) ಅವನು ಯಾವ ಭೂಮಿಗೆ ಗೇಣಿದಾರನಾಗಿದ್ದನೋ ಆ ಭೂಮಿಯ ಭೂ ಕಂದಾಯದ ನೂರುಪಟ್ಟಿಗೆ ಸಮಾನವಾದ ಮೊಬಲಗನ್ನು ಅವನಿಗೆ ಸಂದಾಯ ಮಾಡತಕ್ಕದ್ದು ಮತ್ತು ಈ ಅಧಿನಿಯಮದ ಮೇರೆಗೆ ಇನಾಮುದಾರನಿಗೆ ಸಂದಾಯ ಮಾಡಬೇಕಾದ ಮೊತ್ತದಿಂದ ಸದರಿ ಮೊಬಲಗನ್ನು ಮುರಿದುಕೊಳ್ಳತಕ್ಕದ್ದು.

**9. ರಾಜ್ಯ ಸರ್ಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡುವ ಹೊಣೆ:-** ಯಾವುದೇ ಭೂಮಿಗೆ ಸಂಬಂಧಿಸಿ 5ನೇ ಪ್ರಕರಣದ ಮೇರೆಗೆ ಅಧಿಭೋಗದಾರನೆಂದು ನೊಂದಾಯಿತನಾಗಲು ಹಕ್ಕುಳ್ಳ ಪ್ರತಿಯೊಬ್ಬ ವ್ಯಕ್ತಿಯು, ಗೊತ್ತುಪಡಿಸಿದ ದಿನಾಂಕದಿಂದ ಮತ್ತು ದಿನಾಂಕದಂದು ರಾಜ್ಯ ಸರ್ಕಾರಕ್ಕೆ,-

(ಕ) ಈ ಅಧಿನಿಯಮದ ಮೇರೆಗೆ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯನ್ನು ಮಾಡಿದ ಇನಾಮು ಗ್ರಾಮದ ಸಂದರ್ಭದಲ್ಲಿ, ಅಂಥ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯ ಕಾಲದಲ್ಲಿ ಅಂಥ ಭೂಮಿಯ ಬಗ್ಗೆ ನಿಗದಿಪಡಿಸಿದ ಭೂ ಕಂದಾಯಕ್ಕೆ ಸಮನಾದ ಮೊಬಲಗನ್ನು;

(ಖ) ಈ ಅಧಿನಿಯಮದ ಮೇರೆಗೆ ಮೋಜಣಿ ಮತ್ತು ಕಂದಾಯ ವ್ಯವಸ್ಥೆಯನ್ನು ಮಾಡಿರದ ಇನಾಮು ಗ್ರಾಮದ ಸಂದರ್ಭದಲ್ಲಿ, ಪರಭಾರೆಯಾಗದ ಪಕ್ಕದ ಗ್ರಾಮದಲ್ಲಿ ಅಂಥದೇ ವ್ಯಾಪ್ತಿಯ ಭೂಮಿಯ ಮೇಲೆ ವಿಧಿಸಿದ ಭೂಕಂದಾಯಕ್ಕೆ ಸಮನಾದ ಮೊಬಲಗನ್ನು-

– ಭೂಕಂದಾಯವೆಂದು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(2) ಡೆಪ್ಯುಟಿ ಕಮಿಷನರು, ತಾನು ಸೂಕ್ತವೆಂದು ಆಲೋಚಿಸುವಂಥ ವಿಚಾರಣೆಯನ್ನು ನಡೆಸಿದ ಅನಂತರ, (1)ನೇ ಉಪಪ್ರಕರಣದ (ಖ) ಖಂಡದ ಮೇರೆಗೆ ಸಂದಾಯ ಮಾಡಬೇಕಾದ ಭೂ ಕಂದಾಯವನ್ನು ನಿರ್ಧರಿಸತಕ್ಕದ್ದು.

**10. ಕೆಲವು ಸಂದರ್ಭಗಳಲ್ಲಿ ಹಕ್ಕನ್ನು ಉಳಿಸುವುದು:–** ಗೊತ್ತುಪಡಿಸಿದ ದಿನಾಂಕಕ್ಕಿಂತ ಮುಂಚೆ, 5ನೇ ಪ್ರಕರಣದ ಮೇರೆಗೆ ನೊಂದಣಿಯಾದ ಭೂಮಿಯಲ್ಲದ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಭೂಮಿಯಲ್ಲಿನ, ಯಾವುದೇ ಗಣಿಗಳಲ್ಲಿನ ಅಥವಾ ಖನಿಜಗಳಲ್ಲಿನ, ಕಲ್ಲುಗಣಿಗಳಲ್ಲಿನ, ಮೀನುಗಾರಿಕೆಯಲ್ಲಿನ, ಹಾಯ್ಗಡಗಳಲ್ಲಿನ ಅಥವಾ ಅರಣ್ಯಗಳಲ್ಲಿನ ಹಕ್ಕುಗಳನ್ನು ಒಳಗೊಂಡು, ಯಾವುದೇ ಹಕ್ಕನ್ನು ಇನಾಮುದಾರನು ಸೃಜಿಸಿರುವಲ್ಲಿ ಆ ವ್ಯವಹಾರಗಳನ್ನು ಸಿಂಧುವೆಂದು ಭಾವಿಸತಕ್ಕದ್ದು ಮತ್ತು ಗೊತ್ತುಪಡಿಸಿದ ದಿನಾಂಕದಂದು ಅಥವಾ ಅನಂತರ ಅದರ ಮೇರೆಗೆ ಉದ್ಭವಿಸುವ ಎಲ್ಲ ಹಕ್ಕುಗಳು ಮತ್ತು ಬಾಧ್ಯತೆಗಳು ರಾಜ್ಯ ಸರ್ಕಾರದಿಂದ ಅಥವಾ ಅದರ ವಿರುದ್ಧವಾಗಿ ಜಾರಿಗೊಳಿಸಬಹುದಾದಂಥವುಗಳಾಗಿರತಕ್ಕದ್ದು;

ಪರಂತು, ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಆ ವ್ಯವಹಾರವು ಶೂನ್ಯ ಮತ್ತು ಕಾನೂನು ವಿರುದ್ಧವಾಗಿರತಕ್ಕದ್ದಲ್ಲ;

ಮತ್ತೂ ಪರಂತು, ಯಾವುದೇ ಭೂಮಿಯ ಮೇಲೆ ಅಂಥ ಹಕ್ಕನ್ನು ಸೃಜಿಸಿದಲ್ಲಿ, ಅದು 5ನೇ ಪ್ರಕರಣದ ಮೇರೆಗೆ ನೋಂದಣಿಯಾದ ಭೂಮಿಗಳಿಗೆ ಸಂಬಂಧಿಸಿದ ಹೊರತು, ಹಾಗೆ ಮಾಡುವುದು ಸಾರ್ವಜನಿಕ ಹಿತದೃಷ್ಟಿಯಿಂದ ಎಂದು ರಾಜ್ಯ ಸರ್ಕಾರವು ಅಭಿಪ್ರಾಯ ಪಟ್ಟರೆ, ಸಂಬಂಧಪಟ್ಟ ವ್ಯಕ್ತಿಗೆ ಅದು ನೋಟೀಸು ಕೊಡುವ ಮೂಲಕ ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದ ದಿನಾಂಕದಿಂದ ಮೂರು ತಿಂಗಳ ಅವಧಿಗೆ ಮುಂಚಿತವಲ್ಲದ ದಿನಾಂಕದಿಂದ ಜಾರಿಗೆ ಬರುವಂತೆ ಹಕ್ಕನ್ನು ಕೊನೆಗೊಳಿಸಬಹುದು.

(2) ಹಿಂದೆ ಹೇಳಿದ ಪರಂತುಕದ ಮೇರೆಗೆ ರಾಜ್ಯ ಸರ್ಕಾರವು ಯಾರ ಹಕ್ಕನ್ನು ಕೊನೆಗೊಳಿಸಿತೋ ಆ ವ್ಯಕ್ತಿಯು, ಯಾವ ಅವಧಿಗೆ ಹಕ್ಕನ್ನು ಸೃಜಿಸಲಾಯಿತೋ ಆ ಅವಧಿಯು ಮುಗಿಯದೆ ಉಳಿದಿರುವ ಭಾಗಕ್ಕಾಗಿ ಆ ಭೂಮಿಯಿಂದ ಅಂಥ ವ್ಯಕ್ತಿಯು ಪಡೆಯುವ ಅಂದಾಜು ಮಾಡಲಾದ ನಿವ್ವಳ ಆದಾಯಕ್ಕೆ ಸಮನಾದ ಮೊಬಲಗನ್ನು, ಆ ಪ್ರಕರಣದ ಎಲ್ಲ ವಿದ್ಯಮಾನಗಳನ್ನು ಗಮನಿಸಿ, ರಾಜ್ಯ ಸರ್ಕಾರದಿಂದ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(3) ಸಾಗುವಳಿಯಾಗದ ಜಿಮ್ಮಾ ಭೂಮಿಗಳಿಗೆ ಸಂಬಂಧಿಸಿ, ಗೊತ್ತುಪಡಿಸಿದ ದಿನಾಂಕಕ್ಕೆ ನಿಕಟಪೂರ್ವದಲ್ಲಿ ಯಾವನೇ ವ್ಯಕ್ತಿಯು ಚಲಾಯಿಸಿದ ಯಾವುದೇ ಹಕ್ಕನ್ನು ಅಥವಾ ಉಪಭೋಗಿಸಿದ ವಿಶೇಷ ಹಕ್ಕನ್ನು ಈ ಅಧಿನಿಯಮದಲ್ಲಿ ಏನೇ ಇದ್ದರೂ ಮತ್ತು ಈ ಬಗ್ಗೆ ಇತರ ಉಪಬಂಧವನ್ನು ಮಾಡುವವರೆಗೆ, ಚಲಾಯಿಸುವುದು ಅಥವಾ ಅನುಭೋಗಿಸುವುದು ಮುಂದುವರೆಯತಕ್ಕದ್ದು.

## ಅಧ್ಯಾಯ–III

**11. ಅಧಿಭೋಗದಾರನೆಂದು ನೊಂದಾಯಿತನಾಗುವ ಬಗ್ಗೆ ಪ್ರಕ್ರಿಯೆ:–** ಈ ಅಧಿನಿಯಮದ ಮೇರೆಗೆ ಅಧಿಭೋಗದಾರನೆಂದು ನೊಂದಾಯಿತನಾಗಲು ಹಕ್ಕುಳ್ಳ ಪ್ರತಿಯೊಬ್ಬ ವ್ಯಕ್ತಿಯು, ಕರ್ನಾಟಕ ಭೂ ಸುಧಾರಣಾ ಅಧಿನಿಯಮದ ಮೇರೆಗೆ ರಚಿತವಾದ ನ್ಯಾಯಾಧಿಕರಣಕ್ಕೆ ಗೊತ್ತುಪಡಿಸಲಾದ ದಿನಾಂಕದಿಂದ ಆರು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅಂಥ ಅರ್ಜಿಯು ಸದರಿ ಅಧಿನಿಯಮದ ಮೇರೆಗೆ ಮಾಡಿದ ಅರ್ಜಿಯಾಗಿದ್ದರೆ ಹೇಗೋ ಹಾಗೆ ಅದನ್ನು ನ್ಯಾಯಾಧಿಕರಣವು ವಿಲೆ ಮಾಡತಕ್ಕದ್ದು.

**12. ಮೇಲ್ಕೊಡುಗೆ ಇತ್ಯಾದಿಗಳ ಸಂದಾಯ:–** (1) ಈ ಅಧಿನಿಯಮದ ಮೇರೆಗೆ ಅಧಿಭೋಗದಾರನೆಂದು ನೋಂದಾಯಿತನಾಗಲು ಇನಾಮುದಾರನಿಗೆ ಅಥವಾ ಇತರ ವ್ಯಕ್ತಿಗೆ ಇರುವ ಹಕ್ಕು, ಕೆಳಗೆ ನಿರ್ದಿಷ್ಟಪಡಿಸಿದಂತೆ ಮೇಲ್ಕೊಡುಗೆಯನ್ನು ರಾಜ್ಯ ಸರ್ಕಾರಕ್ಕೆ ಅವನು ಸಂದಾಯ ಮಾಡುವುದಕ್ಕೆ ಒಳಪಟ್ಟಿರತಕ್ಕದ್ದು;–

(i) ಇನಾಮುದಾರನಾಗಿದ್ದರೆ ನೋಂದಣಿಯಾಗಬೇಕಾದ ಭೂಮಿಗಳ ಭೂ ಕಂದಾಯದ ಆರರಷ್ಟು;

(ii) 5ನೇ ಪ್ರಕರಣದಲ್ಲಿ ಉಲ್ಲೇಖಿತರಾದ ಇತರ ವ್ಯಕ್ತಿಗಳಾಗಿದ್ದರೆ; ನೋಂದಣಿಯಾಗಬೇಕಾದ ಭೂಮಿಗಳ ಭೂಕಂದಾಯದ ಒಂದು ನೂರರಷ್ಟು.

(2) ಡೆಪ್ಯುಟಿ ಕಮಿಷನರನ ಪೂರ್ವ ಮಂಜೂರಾತಿ ಪಡೆಯದೆ ಮತ್ತು ಮೇಲ್ಕೊಡುಗೆಯಾಗಿ ಈಗಾಗಲೇ ಸಂದಾಯ ಮಾಡಿದ ಮೊಬಲಗಿನ ಜೊತೆಗೆ ಸಂಬಂಧಪಟ್ಟ ಭೂಮಿಗಳ ಭೂ ಕಂದಾಯದ ಇಪ್ಪತ್ತರಷ್ಟಕ್ಕೆ ಸಮನಾದ ಮೊಬಲಗನ್ನು ಸಂದಾಯ ಮಾಡಿದ ಹೊರತು, ನೋಂದಣಿಯಾದ ಭೂಮಿಯನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡತಕ್ಕದ್ದಲ್ಲವೆಂಬ ಅಥವಾ ವಿಭಜನೆ ಮಾಡತಕ್ಕದ್ದಲ್ಲವೆಂಬ ಹೆಚ್ಚಿನ ಷರತ್ತಿಗೆ ಸಹ ಸದರಿ ಹಕ್ಕು ಒಳಪಟ್ಟಿರತಕ್ಕದ್ದು.

## ಅಧ್ಯಾಯ–IV

## ವೈಯಕ್ತಿಕ ಇನಾಮುಗಳಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಮೊಬಲಗನ್ನು ನಿರ್ಧರಿಸುವುದು

**13. ಸಂದಾಯ ಮಾಡಬೇಕಾದ ಮೊಬಲಗನ್ನು ಹೇಗೆ ನಿರ್ಧರಿಸಬೇಕು:–** (1) ವೈಯಕ್ತಿಕ ಇನಾಮಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಮೊಬಲಗನ್ನು ಈ ಅಧ್ಯಾಯದ ಉಪಬಂಧಗಳಿಗನುಸಾರವಾಗಿ ನಿರ್ಧರಿಸತಕ್ಕದ್ದು.

(2) ಮೊಬಲಗನ್ನು ಇಡೀ ಇನಾಮಿಗಾಗಿ ನಿರ್ಧರಿಸತಕ್ಕದ್ದಲ್ಲದೆ ಅದರಲ್ಲಿನ ಹಿತಾಸಕ್ತಿಗಳ ಪೈಕಿ ಪ್ರತಿಯೊಂದು ಬಗೆಗೂ ಪ್ರತ್ಯೇಕವಾಗಿ ನಿರ್ಧರಿಸತಕ್ಕದ್ದಲ್ಲ.

**14. ಸಂದಾಯ ಮಾಡಬೇಕಾದ ಮೊಬಲಗು:–** ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ, ಧಾರ್ಮಿಕ ಅಥವಾ ಧರ್ಮಾರ್ಥ ಇನಾಮಲ್ಲದ ಇತರ ಇನಾಮಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಮೊಬಲಗು ಕೆಳಕಂಡವುಗಳ ಒಟ್ಟು ಮೊತ್ತವಾಗಿರತಕ್ಕದ್ದು, ಎಂದರೆ:–

(i) ಈ ಅಧಿನಿಯಮದ 5ನೇ ಪ್ರಕರಣದ ಮೇರೆಗೆ ನೋಂದಾಯಿತರಾಗಲು ಹಕ್ಕುಳ್ಳ ಗೇಣಿದಾರರು ಹೊಂದಿರುವ ಭೂಮಿಗಳ ನಿವ್ವಳ ವಾರ್ಷಿಕ ಆದಾಯದ ಹತ್ತರಷ್ಟಕ್ಕೆ ಸಮಾನದ ಮೊತ್ತ;

(ii) ಗೊತ್ತುಪಡಿಸಿದ ದಿನಾಂಕದಂದು ವಾಸ್ತವವಾಗಿ ಅಸ್ತಿತ್ವದಲ್ಲಿರುವ ಮತ್ತು ಕರ್ನಾಟಕ ಅರಣ್ಯ ಅಧಿನಿಯಮ, 1963ರ (ಕರ್ನಾಟಕ ಅಧಿನಿಯಮ, 1964ರ 5) ಮೇರೆಗೆ ರಚಿಸಲಾದ ನಿಯಮಗಳಿಗನುಸಾರವಾಗಿ ನೋಂದಾಯಿಸಲಾದ, ಸದರಿ ಭೂಮಿಯಲ್ಲಿರುವಂಥ ಗಂಧದ ಮರಗಳ ಬಗ್ಗೆ ಅರಣ್ಯ ಇಲಾಖೆಯು ನಿರ್ಧರಿಸಿದ ಮೌಲ್ಯ; ಮತ್ತು

(iii) ಸಣ್ಣ ಅರಣ್ಯೋತ್ಪನ್ನದಿಂದ, (ಗಂಧದ ಮರಗಳನ್ನು ಹೊರತುಪಡಿಸಿ) ಬರುವ ಆದಾಯಕ್ಕೆ ಸಂಬಂಧಿಸಿ, ಹಿಂದಿನ ಮೂರು ವರ್ಷಗಳಲ್ಲಿ ಇನಾಮುದಾರನು ಸಣ್ಣ ಉತ್ಪನ್ನದಿಂದ ಪಡೆದ ವಾರ್ಷಿಕ ಆದಾಯದ ಸರಾಸರಿಯ ಮೂರರಷ್ಟಕ್ಕೆ ಸಮಾನವಾದ ಮೊಬಲಗು:

ಪರಂತು, ವಾರ್ಷಿಕ ಸರಾಸರಿ ಒಟ್ಟು ಆದಾಯವನ್ನು ಲೆಕ್ಕಹಾಕುವುದಕ್ಕೆ ಅವಶ್ಯವಾದ ವಿವರಗಳು ಪೂರ್ತಿ ಅವಧಿಯ ಬಗ್ಗೆ ದೊರಕದಿದ್ದಲ್ಲಿ, ಅಥವಾ ದೊರಕುವ ವಿವರಗಳು ಮಹತ್ವದ ಅಂಶಗಳಲ್ಲಿ ತಪ್ಪಾಗಿವೆ ಎಂದು ಕಂಡುಬಂದಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಲೆಕ್ಕಹಾಕತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ನಿವ್ವಳ ವಾರ್ಷಿಕ ಆದಾಯವನ್ನು

(i) ಖಾಯಂ ಗೇಣಿದಾರನು ಹೊಂದಿರುವ ಭೂಮಿಗೆ ಸಂಬಂಧಿಸಿ, ನಿಯಮಿಸಲಾದ ರೀತಿಯಲ್ಲಿ ನಿರ್ಧರಿಸಿದಂತೆ ರಾಜ್ಯ ಸರ್ಕಾರಕ್ಕೆ ಇನಾಮುದಾರನು ಸಂದಾಯಮಾಡಿದ ಭೂಕಂದಾಯದ, ಜೋಡಿಯ, ಜೋಡಿ ಕಂದಾಯದ ಅಥವಾ ಪೇಷ್‌ಖುಷ್‌ದ ದಾಮಾಷಾ ಪ್ರಮಾಣವನ್ನು ಅಂಥ ಭೂಮಿಗಳ ಭೂಕಂದಾಯದಿಂದ ಕಳೆದ ಬಳಿಕ ಉಳಿಯುವ ಭೂಕಂದಾಯವೆಂದು;

(ii) ಇತರ ಗೇಣಿದಾರರು ಹೊಂದಿರುವ ಭೂಮಿಗಳಿಗೆ ಸಂಬಂಧಿಸಿ, ನಿಯಮಿಸಲಾದ ರೀತಿಯಲ್ಲಿ ನಿರ್ಧರಿಸಿದಂತೆ ರಾಜ್ಯ ಸರ್ಕಾರಕ್ಕೆ ಇನಾಮುದಾರನು ಸಂದಾಯ ಮಾಡಿದ ಭೂಕಂದಾಯದ, ಜೋಡಿಯ, ಜೋಡಿ ಕಂದಾಯದ ಅಥವಾ ಪೇಷ್‌ಖುಷ್‌ದ ದಮಾಷಾ ಪ್ರಮಾಣವನ್ನು ಅಂಥ ಭೂಮಿಗಳ ಭೂಕಂದಾಯದ ಹತ್ತರಷ್ಟರಿಂದ ಕಳೆದ ಬಳಿಕ ಉಳಿಯುವ ಭೂಕಂದಾಯವೆಂದು,

–ಭಾವಿಸತಕ್ಕದ್ದು.

**15. ಮೊಬಲಗಿನ ಸಂದಾಯ:–** (1) ಗೊತ್ತುಪಡಿಸಿದ ದಿನಾಂಕದಿಂದ ಮೊಬಲಗು ಸಂದಾಯಮಾಡುವಂಥದ್ದಾಗಿರತಕ್ಕದ್ದು ಮತ್ತು ಗೊತ್ತುಪಡಿಸಿದ ದಿನಾಂಕದಿಂದ ಸಂದಾಯದ ದಿನಾಂಕದವರೆಗೆ, ವರ್ಷಕ್ಕೆ ಎರಡು ಮತ್ತು ನಾಲ್ಕನೆಯ ಮೂರರಷ್ಟು ದರದ ಬಡ್ಡಿಯನ್ನು ಅದು ಹೊಂದಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಮೊಬಲಗನ್ನು, ಈ ಬಗ್ಗೆ ರಚಿಸಲಾದ ನಿಯಮಗಳಿಗನುಸಾರವಾಗಿ, ಕೆಳಗಿನ ವಿಧಾನಗಳ ಪೈಕಿ ಒಂದು ಅಥವಾ ಹೆಚ್ಚಿನ ವಿಧಾನಗಳಲ್ಲಿ ಸಂದಾಯಮಾಡಬಹುದು, ಎಂದರೆ:–

(i) ನಗದಾಗಿ, ಪೂರ್ತಿಯಾಗಿ ಅಥವಾ ಹತ್ತಕ್ಕೆ ಮೀರದ ವಾರ್ಷಿಕ ಕಂತುಗಳಲ್ಲಿ;

(ii) (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದ ಬಡ್ಡಿಯನ್ನು ಹೊಂದಿರುವ, ವರ್ಗಾವಣೀಯವಾದ ಅಥವಾ ವರ್ಗಾವಣೀಯವಲ್ಲದ ಮತ್ತು ಹತ್ತು ವರ್ಷಗಳಿಗೆ ಮೀರದಂತೆ ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಾಯಿದೆ ತುಂಬುವ ಖಾತರಿ ಮುಖ್ಯಮೌಲ್ಯವುಳ್ಳ ಬಂಧಪತ್ರಗಳಲ್ಲಿ

– ಸಂದಾಯಮಾಡತಕ್ಕದ್ದು;

ಪರಂತು, ಈ ಖಂಡದ ಮೇರೆಗೆ ಕೊಡಲಾದ ಬಂಧಪತ್ರಗಳ ಮೇರೆಗೆ ಸಂದಾಯವಾಗಬೇಕಾದ ಮೊಬಲಗನ್ನು, ನಿಯಮಿಸಬಹುದಾದಂಥ ಹತ್ತು ಕಂತುಗಳಿಗೆ ಮೀರದಂತೆ ಮರುಸಂದಾಯಮಾಡಬಹುದು.

**16. ಮಧ್ಯಕಾಲೀನ ಸಂದಾಯ:–** (1) ನಿಹಿತವಾದ ದಿನಾಂಕದಿಂದ ಆರು ತಿಂಗಳುಗಳ ಅವಧಿಯೊಳಗೆ ಇನಾಮುದಾರನಿಗೆ ಮೊಬಲಗನ್ನು ಸಂದಾಯ ಮಾಡದಿದ್ದಲ್ಲಿ, ಭದ್ರತೆಯ, ಮರುಸಂದಾಯದ ಅಥವಾ ಬೇರೆ ರೀತಿಯ ಬಗ್ಗೆ ನಿಯಮಿಸಬಹುದಾದಂಥ ನಿರ್ಬಂಧಗಳಿಗೆ ಮತ್ತು ಷರತ್ತುಗಳಿಗೆ ಒಳಪಟ್ಟು, ಸಂದಾಯ ಮಾಡಬೇಕಾದ ಅಂದಾಜು ಮೊಬಲಗಿನ ಐದನೇ ಒಂದು ಅಂಶಕ್ಕೆ ಸಮವಾಗುವ ಮಧ್ಯಕಾಲೀನ ಮೊಬಲಗನ್ನು ಅಂಥ ಪ್ರತಿಯೊಬ್ಬ ಇನಾಮುದಾರನಿಗೆ ಸಂದಾಯ ಮಾಡಬೇಕೆಂದು ರಾಜ್ಯ ಸರ್ಕಾರವು ನಿರ್ದೇಶಿಸತಕ್ಕದ್ದು.

(2) ಸಂದಾಯವಾಗಬೇಕಾದ ಅಂದಾಜು ಮೊಬಲಗಿನ ಮೇಲೆ ಅಥವಾ (1)ನೇ ಉಪಪ್ರಕರಣದ ಮೇರೆಗೆ ಮಧ್ಯಕಾಲೀನ ಸಂದಾಯವನ್ನು ಮುರಿದುಕೊಂಡ ಅನಂತರ ಸಂದಾಯವಾಗಬೇಕಾದ ಅಂದಾಜು

ಮೊಬಲಗಿನ ಶಿಲ್ಕಿನ ಮೇಲೆ, 15ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರದಲ್ಲಿ, 17ನೇ ಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಮೊಬಲಗನ್ನು ನಿರ್ಧರಿಸುವವರೆಗೆ;

(ಕ) ಅಂಥ ಇನಾಮುದಾರನ ಹೊರತು, ಮೊಬಲಗಿನಲ್ಲಿ ಹಿತಾಸಕ್ತಿಯುಳ್ಳ ಇತರ ಯಾವ ವ್ಯಕ್ತಿಗಳೂ ಇರದಿದ್ದರೆ ಅಂಥ ಇನಾಮುದಾರನಿಗೆ;

(ಖ) ಇನಾಮುದಾರನ ಹೊರತು, ಮೊಬಲಗಿನಲ್ಲಿ ಹಿತಾಸಕ್ತಿಯನ್ನು 18ನೇ ಪ್ರಕರಣದ ಮೇರೆಗೆ ಕ್ಲೇಮು ಮಾಡಿದ ಇತರ ವ್ಯಕ್ತಿಗಳು ಇದ್ದರೆ, ಅಂಥ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ, ಮತ್ತು ಮೊಬಲಗಿನಲ್ಲಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳು ಲಿಖಿತ ಒಪ್ಪಂದದ ಮೂಲಕ ನಿರ್ದಿಷ್ಟಪಡಿಸಬಹುದಾದ ದಾಮಾಷಾ ಪ್ರಾಮಾಣದಲ್ಲಿ

–ಪ್ರತಿವರ್ಷ ಸಂದಾಯ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಮಧ್ಯಕಾಲೀನ ಮೊಬಲಗನ್ನು ಮತ್ತು (2)ನೇ ಉಪಪ್ರಕರಣದ ಮೇರೆಗೆ ಸಂದಾಯವಾಗಬೇಕದ ಬಡ್ಡಿಯನ್ನು ನಿಯಮಿಸಬಹುದಾದ ರೀತಿಯಲ್ಲಿ ಸಂದಾಯ ಮಾಡಬಹುದು.

**17. ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಡೆಪ್ಯುಟಿ ಕಮಿಷನರು ನಿರ್ಧರಿಸುವುದು:–** (1) ಅದಕ್ಕೆ ಸಂಬಂಧಿಸಿದಂತೆ ಲಿಖಿತ ರೂಪದಲ್ಲಿ ಅಥವಾ ಬಾಯಿ ಮಾತಿನಲ್ಲಿ ಅರ್ಜಿದಾರನು ತನ್ನ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟ ಅನಂತರ, ಇನಾಮಿಗೆ ಅನ್ವಯಿಸಬಹುದಾದಂಥ ಹಿಂದೆ ಹೇಳಿದ ಉಪಬಂಧಗಳಿಗನುಸಾರವಾಗಿ, ಇನಾಮಿಗೆ ಸಂಬಂಧಿಸಿ ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಡೆಪ್ಯುಟಿ ಕಮೀಷನರು ನಿರ್ಧರಿಸತಕ್ಕದ್ದು.

ಪರಂತು, ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ನೇಮಿಸಬಹುದಾದಂಥ ಅಧಿಕಾರಿಯ ಪೂರ್ವಾನುಮೋದನೆಯಿಲ್ಲದೆ, ಡೆಪ್ಯುಟಿ ಕಮಿಷನರು ಅಂಥ ಯಾವ ನಿರ್ಧಾರವನ್ನು ಮಾಡತಕ್ಕದ್ದಲ್ಲ.

(2) ಯಾವನೇ ಇನಾಮುದಾರನು ಅಥವಾ ಹಿತಾಸಕ್ತಿಯುಳ್ಳ ಇತರ ವ್ಯಕ್ತಿಯು, ನಿಯಮಿಸಬಹುದಾದಂಥ ಕಾಲದೊಳಗೆ ಅಥವಾ ಡೆಪ್ಯುಟಿ ಕಮಿಷನರು ತನ್ನ ವಿವೇಚನೆಯಂತೆ ಅನುಮತಿಸಬಹುದಾದಂಥ ಇನ್ನೂ ಹೆಚ್ಚಿನ ಕಾಲದೊಳಗೆ, ಸಂದಾಯವಾಗಬೇಕಾದ ಒಟ್ಟು ಮೊಬಲಗನ್ನು ಯಾವ ಅಂಕಿಅಂಶಗಳ ಆಧಾರದ ಮೇಲೆ ನಿರ್ಧರಿಸಲು ತಾನು ಉದ್ದೇಶಿಸಿರುವನೋ ಆ ಅಂಕಿಅಂಶಗಳ ಪ್ರತಿಗಾಗಿ ಡೆಪ್ಯುಟಿ ಕಮೀಷನರಿಗೆ ಲಿಖಿತ ರೂಪದಲ್ಲಿ ಅರ್ಜಿಯನ್ನು ಸಲ್ಲಿಸಬಹುದು.

(3) ಅಂಥ ಅರ್ಜಿಯು ತಲುಪಿದ ಮೇಲೆ, ಮೇಲೆ ಹೇಳಿದ ಅಂಕಿ ಅಂಶಗಳನ್ನು ಡೆಪ್ಯುಟಿ ಕಮಿಷನರು ಅರ್ಜಿದಾರನಿಗೆ ಒದಗಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಸಂಬಂಧಪಟ್ಟ ಪ್ರತಿಯೊಬ್ಬ ಇನಾಮುದಾರನಿಗೆ, ಮತ್ತು (2)ನೇ ಉಪ ಪ್ರಕರಣದ ಮೇರೆಗಿನ ಪ್ರತಿಯೊಬ್ಬ ಅರ್ಜಿದಾರನಿಗೆ ಸಹ ಕಳುಹಿಸಿಕೊಡತಕ್ಕದ್ದು.

**18. ಲೆಕ್ಕಪತ್ರಗಳಲ್ಲಿ ಹಿತಾಸಕ್ತಿಯುಳ್ಳ ವ್ಯಕ್ತಿಗಳಿಗೆ ನೋಟೀಸುಗಳು:–** (1) ಗೊತ್ತುಪಡಿಸಿದ ದಿನಾಂಕದ ಅನಂತರ ಆದಷ್ಟು ಬೇಗನೆ, ಡೆಪ್ಯುಟಿ ಕಮಿಷನರು.–

(ಕ) ಇನಾಮಿನಲ್ಲಿ ಮತ್ತು ಅದರ ಆಸುಪಾಸಿನಲ್ಲಿ 1ನೆ ಪ್ರಕರಣದ (3)ನೇ ಉಪಪ್ರಕರಣದ ಮೇರೆಗಿನ ಅಧಿಸೂಚನೆಯ ಪ್ರತಿಗಳನ್ನು ಪ್ರಕಟಿಸತಕ್ಕದ್ದು;

(ಖ) ಇನಾಮುದಾರನನ್ನು ಹಿಸ್ಸೆಯ ಮೂಲಕವಾಗಲಿ ಅಥವಾ ಜೀವನಾಂಶದ ರೂಪದಲ್ಲಾಗಲಿ ಅಥವಾ ಇತರ ರೀತಿಯಲ್ಲಾಗಲಿ ಅಂಥ ಯಾವುದೇ ಭಾಗವನ್ನು ಕ್ಲೇಮು ಮಾಡುವ ಅವನ ಕುಟುಂಬದ ಸದಸ್ಯರನ್ನು ಮತ್ತು 5ನೇ ಪ್ರಕರಣದ ಅಥವಾ 7ನೇ ಪ್ರಕರಣದ ಮೇರೆಗೆ ಇನಾಮುದಾರನಲ್ಲಿ ನಿಹಿತವಾದ ಭೂಮಿಗಳನ್ನು ಮತ್ತು ಕಟ್ಟಡಗಳನ್ನು ಹೊರತುಪಡಿಸಿ, ಇನಾಮನ್ನು ಅಥವಾ ಅದರ ಯಾವುದೇ ಭಾಗವನ್ನು ಯಾವ ಸಾಲ ಕೊಟ್ಟವರ ಋಣಗಳಿಗೆ ಅಡಮಾನದ ಮೂಲಕ ಅಥವಾ ಅವುಗಳ ಮೇಲಿನ ಋಣ ಭಾರದ ಮೂಲಕ ಭದ್ರತೆಯೊದಗಿಸಲಾಗಿದೆಯೋ ಆ ಸಾಲಕೊಟ್ಟವರನ್ನು ಒಳಗೊಂಡು, ಮೊಬಲಗಿನಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಹಿತಾಸಕ್ತಿಯುಳ್ಳ ಎಲ್ಲ ವ್ಯಕ್ತಿಗಳ ಕ್ಲೇಮುಗಳನ್ನು, ಅಂಥ ಕ್ಲೇಮುಗಳ ಸ್ವರೂಪ ಮತ್ತು ವಿವರಗಳೊಂದಿಗೆ, ಅವನಿಗೆ ಖುದ್ದಾಗಿ ಅಥವಾ ಏಜಂಟನ ಮೂಲಕ, ಆ ನೋಟೀಸಿನಲ್ಲಿ ನಮೂದಿತವಾದ ಕಾಲದಲ್ಲಿ ಮತ್ತು ಸ್ಥಳದಲ್ಲಿ, ಆದರೆ ಆ ನೋಟೀಸಿನ ಪ್ರಕಟಣೆಯ ದಿನಾಂಕದಿಂದ ಅರವತ್ತು ದಿನಗಳಿಗೆ ಮುಂಚಿತವಲ್ಲದಂಥ ಕಾಲದಲ್ಲಿ, ತನಗೆ ಸಲ್ಲಿಸಬೇಕೆಂದು ಕೋರಿ, ಇನಾಮಿನಲ್ಲಿ ಅಥವಾ ಅದರ ಸಮೀಪದ ಅನುಕೂಲವಾದ ಸ್ಥಳದಲ್ಲಿ ಸಾರ್ವಜನಿಕ ನೋಟೀಸನ್ನು ಕೊಡುವಂತೆ ಮಾಡತಕ್ಕದ್ದು. ಅಂಥ ನೋಟೀಸನ್ನು ಸರ್ಕಾರೀ ರಾಜ್ಯ ಪತ್ರದಲ್ಲಿಯೂ ಸಹ ಪ್ರಕಟಿಸತಕ್ಕದ್ದು.

(2) ಸಂದಾಯವಾಗಬೇಕಾದ ಮೊಬಲಗಿನ ಬಗ್ಗೆ ಮೇಲೆ ಹೇಳಿದ ಕಾಲದೊಳಗೆ ಡೆಪ್ಯುಟಿ ಕಮೀಷನರಿಗೆ ಸಲ್ಲಿಸದಿರುವ ಪ್ರತಿಯೊಂದು ಕ್ಲೇಮು ಮೇಲೆ ಹೇಳಿದ ಅವಧಿಯನ್ನು ಮೀರಿ ಕ್ಲೇಮು ಮಾಡಲು ಡೆಪ್ಯುಟಿ ಕಮೀಷನರು ಸಾಕಷ್ಟು ಕಾರಣಕ್ಕಾಗಿ ಅನುಮತಿಸಿದ್ದ ಸಂದರ್ಭಗಳಲ್ಲಿ ಹೊರತು, ಜಾರಿಗೊಳಿಸುವಂಥದಾಗಿರುವುದು ಕೊನೆಗೊಳ್ಳತಕ್ಕದ್ದು.

**19. ಡೆಪ್ಯುಟಿ ಕಮಿಷನರು ಮೊಬಲಗನ್ನು ಹಂಚಿಕೊಡುವುದು:–** 18ನೇ ಪ್ರಕರಣದ ಮೇರೆಗೆ ಕ್ಲೇಮು ಮಾಡಿದ ಎಲ್ಲ ವ್ಯಕ್ತಿಗಳಿಗೆ ಮತ್ತು ಹಿತಾಸಕ್ತಿಯುಳ್ಳವರೆಂದು ತಾನು ಪರ್ಯಾಲೋಚಿಸುವ ಇತರ ವ್ಯಕ್ತಿಗಳಿಗೆ ನೋಟೀಸನ್ನು ಕೊಟ್ಟ ಅನಂತರ, ಡೆಪ್ಯುಟಿ ಕಮಿಷನರು ತಾನು ನಿರ್ಧರಿಸಿದ ಕ್ಲೇಮುಗಳ ಸಿಂಧುತ್ವದ ಬಗ್ಗೆ ವಿಚಾರಣೆಯನ್ನು ಮಾಡತಕ್ಕದ್ದು ಮತ್ತು ತನ್ನ ಅಭಿಪ್ರಾಯದ ಮೇರೆಗಿನ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಗಳನ್ನು ಮತ್ತು ಅದರಲ್ಲಿ ಪ್ರತಿಯೊಬ್ಬರು ಎಷ್ಟು ಮೊಬಲಗಿಗೆ ಹಕ್ಕುಳ್ಳವರೆಂಬುದನ್ನು ನಿರ್ಧರಿಸತಕ್ಕದ್ದು.

**20. ಮೊಬಲಗಿನ ಹಂಚಿಕೆಯ ಬಗ್ಗೆ ಪ್ರಕ್ರಿಯೆ:–** (1) ಹಾಗೆ ನಿರ್ಧರಿಸುವುದಕ್ಕೆ ಪೂರ್ವಭಾವಿಯಾಗಿ ಇನಾಮುದಾರನಿಗೆ ಮತ್ತು ಇನಾಮಿನಿಂದ ಹಾಗೂ ಅದರ ಆದಾಯದಿಂದ ಜೀವನಾಂಶ ಪಡೆಯಲು ಹಕ್ಕುಳ್ಳ ವ್ಯಕ್ತಿಗಳನ್ನೊಳಗೊಂಡು 4ನೇ ಪ್ರಕರಣದ (2)ನೇ ಉಪಪ್ರಕರಣದ (ಖ) ಖಂಡದ ಮೇರೆಗೆ ಇನಾಮಿನಲ್ಲಿನ ಯಾರ ಹಕ್ಕುಗಳು ಅಥವಾ ಹಿತಾಸಕ್ತಿಗಳು ರಾಜ್ಯ ಸರ್ಕಾರಕ್ಕೆ ಪ್ರಾಪ್ತವಾಗಿವೆಯೋ ಅಥವಾ ಅದರಲ್ಲಿ ನಿಹಿತವಾಗಿವೆಯೋ ಆ ಇತರ ವ್ಯಕ್ತಿಗಳಿಗೆ, ಸಾಧ್ಯವಾದಷ್ಟು ಮಟ್ಟಿಗೆ ಇನಾಮಿನಲ್ಲಿನ ಅವರ ಅನುಕ್ರಮ ಹಿತಾಸಕ್ತಿಗಳ ಮೌಲ್ಯಕ್ಕೆ ಅನುಸಾರವಾಗಿ, ಡೆಪ್ಯುಟಿ ಕಮಿಷನರು ಮೊಬಲಗನ್ನು ಹಂಚಿಕೊಡತಕ್ಕದ್ದು.

(2) ಹಿತಾಸಕ್ತಿಗಳ ಮೌಲ್ಯವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಖಚಿತ ಪಡಿಸಿಕೊಳ್ಳತಕ್ಕದ್ದು.

**21. ಸಾಲಕೊಟ್ಟವರ ಕ್ಲೇಮುಗಳು:–** (1) 20ನೇ ಪ್ರಕರಣದಲ್ಲಿ ಉಲ್ಲೇಖಿಸಿದ ವ್ಯಕ್ತಿಗಳಿಗೆ ಮೊಬಲಗಿನ ಹಂಚಿಕೆ ಮಾಡಿದ ತರುವಾಯ, ಅಥವಾ ಹಂಚಿಕೆಯಾಗುವವರೆಗೆ ಹಾಗೆ ಮಾಡುವುದು ಹೆಚ್ಚು ಅನುಕೂಲಕರವಾಗಿದ್ದಲ್ಲಿ, 19ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಭದ್ರತೆ ಪಡೆದ ಸಾಲ ಕೊಟ್ಟವರ ಅರ್ಜಿಗಳನ್ನು ಡೆಪ್ಯುಟಿ ಕಮಿಷನರನು ಪರಿಶೀಲನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ಸಾಲಕೊಟ್ಟವನು ಎಷ್ಟು ಮೊಬಲಗಿಗೆ ಹಕ್ಕುಳ್ಳವನಾಗಿರುವನೆಂಬುದನ್ನು ಮತ್ತು ಅಂಥ ಮೊಬಲಗನ್ನು ಅಥವಾ ವ್ಯಕ್ತಿಗಳ ಹಿಸ್ಸೆಯಿಂದ ಅಥವಾ ಹಿಸ್ಸೆಗಳಿಂದ ಸಂದಾಯ ಮಾಡಬೇಕೆಂಬುದನ್ನು ತೀರ್ಮಾನಿಸತಕ್ಕದ್ದು:

ಪರಂತು, ಭೂ ಕಂದಾಯವಾಗಿ ಅಥವಾ ಇತರ ರೀತಿಯಾಗಿ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ ಯಾವುದೇ ಮೊಬಲಗನ್ನು ಸಂದಾಯವಾಗಬೇಕಾದ ಮೊಬಲಗಿನಿಂದ ಮೊದಲು ಕಳೆಯತಕ್ಕದ್ದು.

(2) ಯಾವುದೇ ಅಡಮಾನವನ್ನು ಅಥವಾ ಋಣಭಾರವನ್ನು ಹೊಂದಿರುವ ಭದ್ರತೆ ಒದಗಿಸಿದ ಕಾರಣದಿಂದಾಗಿ ಭದ್ರತೆಪಡೆದ ಸಾಲಕೊಟ್ಟವರಿಗೆ ರಾಜ್ಯ ಸರ್ಕಾರವು ಸಂದಾಯ ಮಾಡಬೇಕಾದ ಮೊಬಲಗು, ತತ್ಕಾಲದಲ್ಲಿ ಜಾರಿಯಲ್ಲಿದ್ದ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಇನಾಮಿಗೆ ಅಥವಾ ಅದರ ಭಾಗಕ್ಕೆ ಸಂಬಂಧಿಸಿ ಸಂದಾಯವಾಗಬೇಕಾದ ಮೊಬಲಗನ್ನು ಮೀರತಕ್ಕದ್ದಲ್ಲ.

**22. ಮೊಬಲಗಿನಲ್ಲಿ ಹಿತಾಸಕ್ತಿಯ ಪ್ರಾಪ್ತಿ:-** ಮೊಬಲಗಿನ ಯಾವುದೇ ಭಾಗದ ಸಂದಾಯವನ್ನು ಪಡೆಯಲು ಹಕ್ಕುಳ್ಳ ಯಾವನೇ ವ್ಯಕ್ತಿಯ ಹಿತಾಸಕ್ತಿಯು ಪಕ್ಷಕಾರರ ಕಾರ್ಯದಿಂದಾಗಿಯಾಗಲೀ ಅಥವಾ ಕಾನೂನಿನ ಪ್ರವರ್ತನೆಯಿಂದಾಗಲೀ, ಇತರ ಯಾವನೇ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಪ್ರಾಪ್ತವಾಗಿದೆಯೆಂದು ಹೇಳಲಾಗಿದ್ದಲ್ಲಿ ಡೆಪ್ಯುಟಿ ಕಮಿಷನರು ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಸೂಕ್ತ ಅವಕಾಶವನ್ನು ಕೊಟ್ಟು ಅನಂತರ ಯಾವುದೇ ಹಿತಾಸಕ್ತಿಯು ಪ್ರಾಪ್ತವಾಗಿದೆಯೇ ಎಂಬುದನ್ನು ಆಗಿದ್ದರೆ ಅದು ಯಾರಿಗೆ ಪ್ರಾಪ್ತವಾಗಿದೆ ಎಂಬುದನ್ನು ನಿರ್ಧರಿಸತಕ್ಕದ್ದು.

## ಅಧ್ಯಾಯ-V

## ಧಾರ್ಮಿಕ ಮತ್ತು ಧರ್ಮಾರ್ಥ ಇನಾಮುಗಳಿಗೆ ಸಂಬಂಧಿಸಿ ಸಂದಾಯವಾಗಬೇಕಾದ ಮೊಬಲಗು

**23. ಸಂದಾಯವಾಗಬೇಕಾದ ಮೊಬಲಗು:-** ಈ ಅಧಿನಿಯಮದ ಮೇರೆಗೆ, ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಧಾರ್ಮಿಕ ಮತ್ತು ಧರ್ಮಾರ್ಥ ಇನಾಮುಗಳಿಗೆ ಸಂಬಂಧಿಸಿ ಆ ಧಾರ್ಮಿಕ ಮತ್ತು ಧರ್ಮಾರ್ಥ ಸಂಸ್ಥೆಗಳು ಅಸ್ತಿತ್ವದಲ್ಲಿ ಇರುವವರೆಗೆ ಅಂಥ ಇನಾಮುಗಳಲ್ಲಿ ಇರುವ ಭೂಮಿಯ ಬಗ್ಗೆ ಸಂದಾಯವಾಗಬೇಕಾದ ಭೂ ಕಂದಾಯದ ಹತ್ತರಷ್ಟಕ್ಕೆ ಸಮನಾದ ಮೊಬಲಗನ್ನು ರಾಜ್ಯ ಸರ್ಕಾರವು ಪ್ರತಿಯೊಬ್ಬ ಇನಾಮುದಾರನಿಗೆ ಪ್ರತಿವರ್ಷ ಸಂದಾಯಮಾಡತಕ್ಕದ್ದು.

**24. ಡೆಪ್ಯುಟಿ ಕಮಿಷನರು ಮೊಬಲಗನ್ನು ನಿರ್ಧರಿಸುವುದು:-** (1) 23ನೇ ಪ್ರಕರಣದ ಮೇರೆಗೆ ಇನಾಮುದಾರನಿಗೆ ಸಂದಾಯವಾಗಬೇಕಾದ ಮೊಬಲಗನ್ನು ಡೆಪ್ಯುಟಿ ಕಮಿಷನರು, ಆದೇಶದ ಮೂಲಕ ನಿರ್ಧರಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಸಂಬಂಧಪಟ್ಟ ಇನಾಮುದಾರನಿಗೆ ಒದಗಿಸತಕ್ಕದ್ದು.

## ಅಧ್ಯಾಯ-VI

## ಸಂಕೀರ್ಣ

**25. ವ್ಯಕ್ತಿಯು ಅಧಿಭೋಗದಾರನೆಂದು ನೋಂದಾಯಿತನಾಗಬಹುದಾದ ಭೂಮಿಯ ವಿಸ್ತೀರ್ಣ:-** 5ನೇ ಪ್ರಕರಣದಲ್ಲಿ ಉಲ್ಲೇಖಿತನಾದ ವ್ಯಕ್ತಿಯು ಗಿಯಾ ಭೂಮಿಗೆ ಸಂಬಂಧಿಸಿ ಅಧಿಭೋಗದಾರನಾಗಿ ನೋಂದಾಯಿತನಾಗಲು ಹಕ್ಕುಳ್ಳವನಾಗಿರುವನೋ ಆ ಭೂಮಿಯ ವಿಸ್ತೀರ್ಣವು, ಅವನು ಹೊಂದಿರುವ ಯಾವುದೇ ಭೂಮಿಯು ಸೇರಿ, ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರ ಮೇರೆಗೆ ನಿಗದಿ ಮಾಡಲಾದ ವಿಸ್ತೀರ್ಣವನ್ನು ಮೀರತಕ್ಕದ್ದಲ್ಲ.

**26. ರಾಜ್ಯ ಸರ್ಕಾರದಲ್ಲಿ ನಿಹಿತವಾಗುವ ಭೂಮಿಗಳ ವಿಲೆ:-** ರಾಜ್ಯ ಸರ್ಕಾರದಲ್ಲಿ ನಿಹಿತವಾಗಿರುವ ಮತ್ತು ಈ ಅಧಿನಿಯಮದ ಮೇರೆಗೆ ಯಾವ ಭೂಮಿಗಳಿಗೆ ಸಂಬಂಧಿಸಿ ಯಾವ ವ್ಯಕ್ತಿಯೂ ಅಧಿಭೋಗದಾರನಾಗಿ ನೋಂದಾಯಿತನಾಗಲು ಹಕ್ಕುಳ್ಳವನಾಗಿರುವುದಿಲ್ಲವೋ ಆ ಭೂಮಿಗಳನ್ನು, ರಾಜ್ಯ ಸರ್ಕಾರಕ್ಕೆ ಸೇರಿರುವ ಭೂಮಿಗಳ ಬಗ್ಗೆ ಈ ಅಧಿನಿಯಮದ ಮೇರೆಗೆ ಕಾಲಕಾಲಕ್ಕೆ ರಚಿತವಾದ ನಿಯಮಗಳಿಗನುಸಾರವಾಗಿ ವಿಲೆ ಮಾಡತಕ್ಕದ್ದು.

**27. ಡಿವಿಜನಲ್ ಕಮಿಷನರಿಂದ ಪುನರೀಕ್ಷಣೆ:–** 17ನೇ ಪ್ರಕರಣದ ಅಥವಾ 24ನೇ ಪ್ರಕರಣದ ಮೇರೆಗೆ ಡೆಪ್ಯುಟಿ ಕಮಿಷನರು ಮಾಡಿದ ಯಾವುದೇ ಆದೇಶದ ದಾಖಲೆಯನ್ನು ಡಿವಿಜನಲ್ ಕಮಿಷನರು ಯಾವುದೇ ಕಾಲದಲ್ಲಿ ತರಿಸಿಕೊಳ್ಳಬಹುದು, ಮತ್ತು ಪರೀಕ್ಷಿಸಬಹುದು ಮತ್ತು ಅಂಥ ಆದೇಶವು ರಾಜ್ಯದ ರಾಜಸ್ವದ ಹಿತಾಸಕ್ತಿಗೆ ಪ್ರತಿಕೂಲವಾಗಿರುವಷ್ಟರ ಮಟ್ಟಿಗೆ ತಪ್ಪಾದುದಾಗಿದೆಯೆಂದು ಅವನು ಪರ್ಯಾಲೋಚಿಸಿದರೆ, ತಾನು ಅವಶ್ಯವೆಂದು ಭಾವಿಸುವಂಥ ವಿಚಾರಣೆಯನ್ನು ಮಾಡಿದ ಅಥವಾ ಮಾಡಿಸಿದ ಅನಂತರ ಮತ್ತು ಬಾಧಿತ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಅನಂತರ, ಸಂದಾಯವಾಗಬೇಕಾದ ಮೊಬಲಗನ್ನು ಕಡಿಮೆ ಮಾಡುವ ಆದೇಶವನ್ನು ಒಳಗೊಂಡು ಅಥವಾ ಡೆಪ್ಯುಟಿ ಕಮಿಷನರು ಹೊಸ ನಿರ್ಧಾರವನ್ನು ಮಾಡುವಂತೆ ನಿರ್ದೇಶಿಸುವಂಥ, ಆ ಪ್ರಕರಣದ ವಿಧ್ಯಮಾನಗಳನ್ನು ಸಮರ್ಥಿಸುವಂತೆ, ಆದೇಶವನ್ನು ಮಾಡಬಹುದು:

ಪರಂತು,

(1) 30ನೇ ಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಲಾಗಿದ್ದಲ್ಲಿ, ಅಥವಾ

(2) ಯಾವ ಆದೇಶವನ್ನು ಪುನರೀಕ್ಷಿಸಬೇಕೆಂದು ಕೋರಲಾಯಿತೋ ಆ ಆದೇಶದ ದಿನಾಂಕದಿಂದ ನಾಲ್ಕು ವರ್ಷಗಳು ಮುಕ್ತಾಯವಾದ ಅನಂತರ; ಅಂಥ ಯಾವ ಆದೇಶವನ್ನೂ ಮಾಡತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಕ್ಕಾಗಿ ಕಾಲಪರಿಮಿತಿಯ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಯಾವುದೇ ನ್ಯಾಯಾಲಯದ ಆದೇಶದ ಮೂಲಕ ಅಥವಾ ನಿರ್ಬಂಧಕಾಜ್ಞೆಯ ಮೂಲಕ ಈ ಪ್ರಕರಣದ ಮೇರೆಗಿನ ಯಾವುದೇ ವ್ಯವಹರಣೆಯನ್ನು ಯಾವ ಅವಧಿಯಲ್ಲಿ ತಡೆಹಿಡಿಯಲಾಗಿತ್ತೋ ಅಂಥ ಯಾವುದೇ ಅವಧಿಯನ್ನು ಹೊರತುಪಡಿಸತಕ್ಕದ್ದು.

**28. ಡಿವಿಜನಲ್ ಕಮಿಷನರಿಂದ ನಿಯಂತ್ರಣ:–** ಡಿವಿಜನಲ್ ಕಮಿಷನರು ತನ್ನ ಅಧಿಕಾರ ವ್ಯಾಪ್ತಿಯೊಳಗೆ,

(ಕ) ಇನಾಮುಗಳನ್ನು ವಹಿಸಿಕೊಳ್ಳುವುದನ್ನು ಮೇಲ್ವಿಚಾರಣೆ ಮಾಡಲು ಮತ್ತು ಅದರ ಆಡಳಿತದ ಬಗ್ಗೆ ಯುಕ್ತ ವ್ಯವಸ್ಥೆಯನ್ನು ಮಾಡಲು;

(ಖ) ಡೆಪ್ಯುಟಿ ಕಮಿಷನರ ಮಾರ್ಗದರ್ಶನಕ್ಕಾಗಿ ಅನುದೇಶಗಳನ್ನು ಕೊಡಲು;

(ಗ) ನಿರ್ದಿಷ್ಟ ಪ್ರದೇಶವು ಇನಾಮಿನ ಭಾಗವೇ ಅಥವಾ ಅಲ್ಲವೇ ಎಂಬುದನ್ನು ಘೋಷಿಸುವ ಡೆಪ್ಯುಟಿ ಕಮಿಷನರ ಯಾವುದೇ ಆದೇಶವನ್ನು ರದ್ದು ಮಾಡಲು ಅಥವಾ ಪುನರೀಕ್ಷಿಸಲು,

– ಅಧಿಕಾರವನ್ನು ಹೊಂದಿರತಕ್ಕದ್ದು.

**29. ರಾಜ್ಯ ಸರ್ಕಾರದಿಂದ ಪುನರೀಕ್ಷಣೆ:–** 28ನೇ ಪ್ರಕರಣದ ಮೇರೆಗೆ ಡಿವಿಜನಲ್ ಕಮಿಷನರು ಮಾಡಿದ ಯಾವುದೇ ಆದೇಶವನ್ನು ರಾಜ್ಯ ಸರ್ಕಾರವು ರದ್ದು ಮಾಡಬಹುದು ಅಥವಾ ಪುನರೀಕ್ಷಿಸಬಹುದು.

**30. 17, 19 ಮತ್ತು 24ನೇ ಪ್ರಕರಣಗಳ ಮೇರೆಗಿನ ಆದೇಶಗಳ ಮೇಲೆ ಅಪೀಲು:–** (1) 17, 19 ಮತ್ತು 24ನೇ ಪ್ರಕರಣಗಳ ಮೇರೆಗೆ ಡೆಪ್ಯುಟಿ ಕಮಿಷನರು ಮಾಡಿದ ಯಾವುದೇ ತೀರ್ಮಾನದ ವಿರುದ್ಧ ರಾಜ್ಯ ಸರ್ಕಾರವು, ಆ ತೀರ್ಮಾನದ ದಿನಾಂಕದಿಂದ ಆರು ತಿಂಗಳುಗಳೊಳಗೆ, ಮತ್ತು ಅಂಥ ತೀರ್ಮಾನದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ತೀರ್ಮಾನದ ದಿನಾಂಕದಿಂದ ತೊಂಬತ್ತು ದಿನಗಳೊಳಗೆ, ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಸಲ್ಲಿಸಬಹುದು, ಮತ್ತು ಅದರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(2) 7ನೇ ಪ್ರಕರಣದ (2)ನೇ ಉಪಪ್ರಕರಣದ ವ್ಯಾಪ್ತಿಯೊಳಗೆ ಯಾವುದೇ ಕಟ್ಟಡವು ಬರುವುದೇ ಅಥವಾ ಇಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆಯು ಉದ್ಭವಿಸಿದರೆ, ಅದನ್ನು ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಕಳಿಸತಕ್ಕದ್ದು ಮತ್ತು ಅದರ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**31. ತಪ್ಪಾಗಿ ಅಥವಾ ಹೆಚ್ಚಾಗಿ ಮಾಡಿದ ಸಂದಾಯಗಳನ್ನು ಭೂ ಕಂದಾಯದ ಬಾಕಿ ಎಂಬಂತೆ ವಸೂಲ್ಮಾಡುವುದು:-** ಯಾವನೇ ವ್ಯಕ್ತಿಗೆ ಮಾಡಿದ ಯಾವುದೇ ಸಂದಾಯವು, ಈ ಅಧಿನಿಯಮದ ಮೇರೆಗೆ ಮಾಡಿದ ಆದೇಶದಿಂದಾಗಿ ಅಥವಾ ಇತರ ರೀತಿಯಿಂದಾಗಿ, ಅವನಿಗೆ ಸಲ್ಲಬೇಕಾದುದಾಗಿರಲಿಲ್ಲವೆಂದು ಅಥವಾ ಅವನಿಗೆ ಸಲ್ಲಬೇಕಾಗಿದ್ದ ಮೊಬಲಗಿಗಿಂತ ಹೆಚ್ಚಾಗಿರುವುದೆಂದು ತರುವಾಯ ಕಂಡುಬಂದಲ್ಲಿ, ಸಂದರ್ಭಾನುಸಾರ, ಅವನಿಗೆ ಸಲ್ಲಬೇಕಾಗಿರಲಿಲ್ಲವೆಂದು ಅಥವಾ ಹೆಚ್ಚಾಗಿ ಸಂದಾಯವಾಗಿದೆಯೆಂದು ಕಂಡುಬಂದ ಮೊಬಲಗನ್ನು ಅಂಥ ವ್ಯಕ್ತಿಗೆ ಸಲ್ಲಬೇಕಾದ ಯಾವುದೇ ಮೊಬಲಗುಗಳಿಂದ ಮುರಿದುಕೊಳ್ಳುವ ಮೂಲಕ ಅನ್ಯಥಾ ಅದನ್ನು ಸರಿ ಹೊಂದಿಸಲಾಗದಿದ್ದರೆ, ಅದು ಭೂ ಕಂದಾಯದ ಬಾಕಿಯಾಗಿದ್ದರೆ ಹೇಗೋ ಹಾಗೆ ವಸೂಲೀಯವಾಗಿರತಕ್ಕದ್ದು.

**32. ಡೆಪ್ಯುಟಿ ಕಮಿಷನರಿಂದ ವಿಚಾರಣೆಗಳು:-** ಈ ಅಧಿನಿಯಮದ ಮೇರೆಗೆ ತನ್ನ ಪರವಾಗಿ ವಿಚಾರಣೆಯನ್ನು ನಡೆಸುವುದಕ್ಕಾಗಿ ತನಗೆ ಅಧೀನನಾದ, ತಹಶೀಲ್ದಾರನ ದರ್ಜೆಗೆ ಕಡಿಮೆಯಿರದ, ಯಾವನೇ ಅಧಿಕಾರಿಯನ್ನು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಡೆಪ್ಯುಟಿ ಕಮಿಷನರು ಅಧಿಕೃತಗೊಳಿಸಬಹುದು:

ಪರಂತು, ಅಂಥ ಯಾವನೇ ಅಧಿಕಾರಿಯು ನಡೆಸಿದ ಯಾವುದೇ ವಿಚಾರಣೆಗೆ ಸಂಬಂಧಿಸಿ ಹೊಸ ಅಥವಾ ಇನ್ನೂ ಹೆಚ್ಚಿನ ವಿಚಾರಣೆಯನ್ನು ನಡೆಸುವುದು ಅವಶ್ಯವೆಂದು ತಾನು ಅಭಿಪ್ರಾಯ ಪಟ್ಟರೆ, ಹೊಸ ಅಥವಾ ಇನ್ನೂ ಹೆಚ್ಚಿನ ವಿಚಾರಣೆಯನ್ನು ನಡೆಸಲು ಅಂಥ ಅಧಿಕಾರಿಗೆ ಡೆಪ್ಯುಟಿ ಕಮಿಷನರು ನಿರ್ದೇಶಿಸಬಹುದು, ಅಥವಾ ತಾನು ಸ್ವತಃ ಹೊಸ ಅಥವಾ ಇನ್ನೂ ಹೆಚ್ಚಿನ ವಿಚಾರಣೆಯನ್ನು ನಡೆಸಬಹುದು.

(2) ಡೆಪ್ಯುಟಿ ಕಮಿಷನರು ಅಥವಾ (1)ನೇ ಉಪಪ್ರಕರಣದ ಮೇರೆಗೆ ಅಧಿಕೃತನಾದ ಯಾವನೇ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ನಡೆಸಿದ ಪ್ರತಿಯೊಂದು ವಿಚಾರಣೆಗೆ ಸಂಬಂಧಿಸಿ, ವಿದ್ಯುಕ್ತ ವಿಚಾರಣೆಗೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ಅಂಥ ವಿಚಾರಣೆಯು ಈ ಅಧಿನಿಯಮದ ಮೇರೆಗಿನ ವಿದ್ಯುಕ್ತ ವಿಚಾರಣೆಯಾಗಿದ್ದರೆ ಹೇಗೋ ಹಾಗೆ, ಅನ್ವಯಿಸತಕ್ಕದ್ದು.

**33. ಈ ಅಧಿನಿಯಮದ ಮೇರೆಗಿನ ಅರ್ಜಿಗಳು, ಆವೇದನಗಳು ಇತ್ಯಾದಿಗಳಿಗಾಗಿ ಸಂದಾಯ ಮಾಡಬೇಕಾದ ಫೀಜು:-** ಕರ್ನಾಟಕ ನ್ಯಾಯಾಲಯ ಫೀಜು ಮತ್ತು ದಾವೆಗಳ ಮೌಲ್ಯ ನಿಗದಿ ಅಧಿನಿಯಮ, 1958ರಲ್ಲಿ (ಕರ್ನಾಟಕ ಅಧಿನಿಯಮ, 1958ರ 16) ಏನೇ ಇದ್ದರೂ, ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಯಾವುದೇ ಅರ್ಜಿಗಾಗಿ, ಅಪೀಲು ವಿವರಣ ಪತ್ರಕ್ಕಾಗಿ ಅಥವಾ ಆವೇದನೆಗಾಗಿ ಸಂದಾಯ ಮಾಡಬೇಕಾದ ಫೀಜು ನಿಯಮಿಸಬಹುದಾದಂಥವುಗಳಾಗಿರತಕ್ಕದ್ದು.

**34. ಕೆಲವು ಸಂದರ್ಭಗಳಲ್ಲಿ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ:-** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆಯನ್ನು ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಮೇರೆಗೆ ಮಾಡಿದ ಅಥವಾ ಮಾಡಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕೆ ಸಂಬಂಧಿಸಿ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ವಿಧಿಸಲಾದ ಕರ್ತವ್ಯಗಳನ್ನು ನಿರ್ವಹಿಸುವಾಗ ಅಥವಾ ಪ್ರಕಾರ್ಯಗಳನ್ನು ನೆರವೇರಿಸುವಾಗ ಸದ್ಭಾವನೆಯಿಂದ ಆ ಕಾರ್ಯವನ್ನು ಮಾಡಿದ್ದರೆ, ರಾಜ್ಯ ಸರ್ಕಾರದ ಯಾವ

ಅಧಿಕಾರಿಯೂ ಅಥವಾ ನೌಕರನೂ ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗಳಿಗೆ ಗುರಿಯಾಗತಕ್ಕದ್ದಲ್ಲ.

(3) ರಾಜ್ಯ ಸರ್ಕಾರದ ಯಾವನೇ ಅಧಿಕಾರಿಯು ಅಥವಾ ನೌಕರನು ಅಂಥ ಕರ್ತವ್ಯದ ಅಥವಾ ಪ್ರಕಾರ್ಯದ ನೆಪದಲ್ಲಿ ಅಥವಾ ಅದನ್ನು ಮೀರಿ ಮಾಡಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿ, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯಿಲ್ಲದೆ ಅಂಥ ಯಾವ ದಾವೆಯನ್ನೂ, ಪ್ರಾಸಿಕ್ಯೂಷನನ್ನೂ ಅಥವಾ ಇತರ ವ್ಯವಹರಣೆಗಳನ್ನೂ ಅಂಥ ಅಧಿಕಾರಿಯ ಅಥವಾ ನೌಕರನ ವಿರುದ್ಧ ಹೂಡಲು ಅವಕಾಶವಿರತಕ್ಕದ್ದಲ್ಲ ಮತ್ತು ಯಾವ ಕಾರ್ಯದ ಬಗ್ಗೆ ದೂರು ಕೊಡಲಾಗಿದೆಯೋ ಆ ಕಾರ್ಯದ ದಿನಾಂಕದಿಂದ ಒಂದು ವರ್ಷವು ಮುಕ್ತಾಯವಾದ ಅನಂತರ ಅಂಥ ಯಾವ ದಾವೆಯನ್ನೂ, ಪ್ರಾಸಿಕ್ಯೂಷನನ್ನೂ ಅಥವಾ ಇತರ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

(4) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಇದ್ದರೂ, ಸಿವಿಲ್ ನ್ಯಾಯಾಲಯವು,–

(i) ಈ ಅಧಿನಿಯಮದ 17, 19 ಮತ್ತು 24ನೇ ಪ್ರಕರಣಗಳ ಮೇರೆಗೆ ಡೆಪ್ಯುಟಿ ಕಮಿಷನರು ತೀರ್ಮಾನಿಸಬೇಕಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ; ಅಥವಾ

(ii) 27ನೇ ಪ್ರಕರಣದ ಮೇರೆಗೆ ಡಿವಿಜನಲ್ ಕಮಿಷನರು ಮಾಡಿದ ಆದೇಶಕ್ಕೆ ಸಂಬಂಧಿಸಿದ ಮತ್ತು ಅಪೀಲು ಮಾಡುವ ಅಧಿಕಾರವು 29ನೇ ಅಥವಾ 30ನೇ ಪ್ರಕರಣದ ಮೇರೆಗೆ ಯಾವುದರ ಬಗ್ಗೆ ಪ್ರದತ್ತವಾಗಿದೆಯೋ ಅದಕ್ಕೆ ಸಂಬಂಧಿಸಿದ,

–ಯಾವುದೇ ಅರ್ಜಿಯನ್ನು ಅಥವಾ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

**35. ನಿಯಮ ರಚನಾಧಿಕಾರ:–** ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಉಪಬಂಧದ ಸಾಮಾನ್ಯಾನ್ವಯಕ್ಕೆ ಬಾಧೆ ಬಾರದಂತೆ ಅಂಥ ನಿಯಮಗಳು ಕೆಳಕಂಡ ವಿಷಯಗಳ ಬಗ್ಗೆ ಉಪಬಂಧಿಸಬಹುದು;

(ಕ) ನಿಯಮಿಸಬೇಕೆಂದು ಈ ಅಧಿನಿಯಮದ ಮೂಲಕ ವ್ಯಕ್ತವಾಗಿ ಅಗತ್ಯಪಡಿಸಲಾದ ಅಥವಾ ಅನುಮತಿಸಲಾದ ಎಲ್ಲ ವಿಷಯಗಳು;

(ಖ) ಡೆಪ್ಯುಟಿ ಕಮಿಷನರು ಮತ್ತು ಈ ಅಧಿನಿಯಮದ ಮೇರೆಗೆ ನೇಮಿಸಲಾದ ಅಥವಾ ಅಧಿಕಾರ ವ್ಯಾಪ್ತಿಯನ್ನುಳ್ಳ ಅಧಿಕಾರಿಗಳು ಅಥವಾ ಪ್ರಾಧಿಕಾರಿಗಳು ಅನುಸರಿಸಬೇಕಾದ ಪ್ರಕ್ರಿಯೆ;

(ಗ) ಇದರಲ್ಲಿ ಆ ಬಗ್ಗೆ ಯಾವ ನಿರ್ದಿಷ್ಟ ಉಪಬಂಧವನ್ನೂ ಕಲ್ಪಿಸಿರದ ಸಂದರ್ಭಗಳಲ್ಲಿ, ಈ ಅಧಿನಿಯಮದ ಮೇರೆಗೆ ಅರ್ಜಿಗಳನ್ನು ಮತ್ತು ಅಪೀಲುಗಳನ್ನು ಯಾವ ಕಾಲದೊಳಗೆ ಸಲ್ಲಿಸಬೇಕು;

(ಘ) ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮತ್ತು ಕಾಲ ಪರಿಮಿತಿ ಅಧಿನಿಯಮ, 1963ರ ಉಪಬಂಧಗಳನ್ನು, ಈ ಅಧಿನಿಯಮದ ಮೇರೆಗಿನ ಅರ್ಜಿಗಳಿಗೆ, ಅಪೀಲುಗಳಿಗೆ ಮತ್ತು ವ್ಯವಹರಣೆಗಳಿಗೆ ಅನ್ವಯಿಸುವುದು.

**36. ದಂಡಗಳು:–** (1) ಯಾವನೇ ವ್ಯಕ್ತಿಯು–

(ಕ) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾನೂನುಬದ್ಧ ಆದೇಶವನ್ನು ಪಾಲಿಸಲು ಉದ್ದೇಶಪೂರ್ವಕವಾಗಿ ತಪ್ಪಿದರೆ ಅಥವಾ ನಿರ್ಲಕ್ಷಿಸಿದರೆ ಅಥವಾ ಅಂಥ ಯಾವುದೇ ಆದೇಶವನ್ನು ಉಲ್ಲಂಘಿಸಿದರೆ; ಅಥವಾ

(ಖ) ಈ ಅಧಿನಿಯಮದ ಮೇರೆಗೆ ರಾಜ್ಯ ಸರ್ಕಾರದಲ್ಲಿ ನಿಹಿತವಾದ ಯಾವುದೇ ಸ್ವತ್ತನ್ನು ವಹಿಸಿಕೊಳ್ಳುವುದಕ್ಕೆ ಅಥವಾ ಅದರ ಸ್ವಾಧೀನವನ್ನು ಪಡೆಯುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಪ್ರತಿರೋಧವನ್ನು ಅಥವಾ ಅಡ್ಡಿಯನ್ನು ಉಂಟುಮಾಡಿದರೆ;

(ಗ) ತಾನು ಸುಳ್ಳೆಂದು ತಿಳಿದ ಅಥವಾ ಸುಳ್ಳೆಂದು ನಂಬಲು ಕಾರಣವಿರುವ ಅಥವಾ ನಿಜವೆಂದು ತಾನು ನಂಬದಿರುವ ಮಾಹಿತಿಯನ್ನು ಒದಗಿಸಿದರೆ;

– ಅವನು ಅಪರಾಧಿಯೆಂದು ಮ್ಯಾಜಿಸ್ಟ್ರೇಟಿನಿಂದ ನಿರ್ಣೀತನಾದ ಮೇಲೆ ಅವನು ಮೂರು ತಿಂಗಳ ವರೆಗಿನ ಕಾರಾವಾಸದಿಂದ ಅಥವಾ ಇನ್ನೂರು ರೂಪಾಯಿಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಡೆಪ್ಯುಟಿ ಕಮಿಷನರ ಪೂರ್ವ ಮಂಜೂರಾತಿಯಿದ್ದ ಹೊರತು, (1)ನೇ ಉಪಪ್ರಕರಣದ ಮೇರೆಗೆ ಯಾವ ಪ್ರಾಸಿಕ್ಯೂಷನನ್ನೂ ಹೂಡತಕ್ಕದ್ದಲ್ಲ.

**37. ತೊಂದರೆಗಳನ್ನು ನಿವಾರಿಸುವ ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಆ ತೊಂದರೆಯನ್ನು ನಿವಾರಿಸುವ ಉದ್ದೇಶಕ್ಕಾಗಿ ಅವಶ್ಯವೆಂದು ತನಗೆ ತೋರಬಹುದಾದಂಥ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದಂಥ, ಆದೇಶವನ್ನು ರಾಜ್ಯ ಸರ್ಕಾರವು ಮಾಡಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದಂದಿನಿಂದ ಎರಡು ವರ್ಷಗಳ ಅವಧಿಯು ಮುಕ್ತಾಯವಾದ ಅನಂತರ ಅಂಥ ಯಾವ ಅಧಿಕಾರವನ್ನೂ ಚಲಾಯಿಸತಕ್ಕದ್ದಲ್ಲ.

**38. ರಾಜ್ಯ ವಿಧಾನಮಂಡಲದ ಮುಂದೆ ನಿಯಮಗಳನ್ನು ಮತ್ತು ಆದೇಶಗಳನ್ನು ಇರಿಸುವುದು:–** 35ನೇ ಪ್ರಕರಣದ ಮೇರೆಗೆ ರಚಿಸಲಾದ ಪ್ರತಿಯೊಂದು ನಿಯಮವನ್ನು ಮತ್ತು 37ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇರಿಸತಕ್ಕದ್ದು, ಮತ್ತು ಅದನ್ನು ಹಾಗೆ ಇರಿಸಿದ ಅಧಿವೇಶನವು ಅಥವಾ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ ಆ ನಿಯಮದಲ್ಲಿ ಅಥವಾ ಆದೇಶದಲ್ಲಿ

ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಅಥವಾ ಆದೇಶವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸರ್ಕಾರಿ ರಾಜ್ಯಪತ್ರದಲ್ಲಿ ಆ ಮಾರ್ಪಾಟನ್ನು ಅಥವಾ ಶೂನ್ಯತೆಯನ್ನು ರಾಜ್ಯ ಸರ್ಕಾರವು ಅಧಿಸೂಚಿಸಿದ ದಿನಾಂಕದಿಂದ, ಆ ನಿಯಮವು ಅಥವಾ ಆದೇಶವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೂ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು ಆ ನಿಯಮದ ಅಥವಾ ಆದೇಶದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಭಾಧೆಯನ್ನುಂಟು ಮಾಡತಕ್ಕದ್ದಲ್ಲ.

**ಎ.ಎನ್. ಬ್ಯಾನರ್ಜಿ,**
ಕರ್ನಾಟಕ ರಾಜ್ಯಪಾಲರು,

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,
**ಎಂ. ಉಮೇಶ್,**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.